EMAIL : dairyadadaari@gmail.com ಸಂಪುಟ: 01 ಸಂಚಿಕೆ: 11
ಬೆಲೆ ರೂ : 2.00
ರಾಯಚೂರು
ಪುಟ: 4

# ಧೈರ್ಯದ ದಾರಿ

ನಿಮ್ಮ ನಂಬಿಕೆಯ ಧ್ವನಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793

KANNADA DAILY NEWS PAPER
ಕನ್ನಡ ದಿನಪತ್ರಿಕೆ

DAIRYADA DAARI
RNI NO: KNKAN/25/A2795 ಭಾನುವಾರ: 14-12-2025

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಸೋನಿಯಾ ಗಾಂಧಿ ಅಂಗಳಕ್ಕೆ ಕರ್ನಾಟಕ ಸಿಎಂ ಕುರ್ಚಿ ಚೆಂಡು



**ಬೆಂಗಳೂರು,ಡಿ.13–** ಸಿಎಂ ಕುರ್ಚಿ ಕದನ ದೆಹಲಿಗೆ ಸ್ಥಳಾಂತರಗೊಳ್ಳಲಿದೆ. ಶತಾಯಗತಾಯ ಸಿಎಂ ಪಟ್ಟ ಪಡೆಯಲೇಬೇಕೆಂದು ಡಿಸಿಎಂ ಡಿ.ಕೆ. ಶಿವಕುಮಾರ್ ನಿರಂತರ ಕಸರತ್ತು ನಡೆಸುತ್ತಿದ್ದರೆ, ಪಟ್ಟದ ಮುಂದುವರಿಕೆಗೆ ಸಿಎಂ ಸಿದ್ದರಾಮಯ್ಯ ಪ್ರಯತ್ನ ನಡೆಸುತ್ತಿದ್ದು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ನಡೆದ ರಾಜಕೀಯ ಮೇಲಾಟಗಳು ಈಗ ಮತ್ತೆ ದೆಹಲಿಗೆ ತಲುಪಿವೆ.

ಸಿಎಂ ಕುರ್ಚಿ ಕದನ ದಿನೇದಿನೇ ತಾರಕಕ್ಕೆ?ರುತ್ತಲೇ ಇದೆ. ಹೈಕಮಾಂಡ್ ಸೂಚನೆಯಂತೆ ಉಪಾಹಾರ ಕೂಟದ ಮೂಲಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್‌ರವರು ನಾಯಕತ್ವ ಬದಲಾವಣೆ ವಿಷಯವನ್ನು ತಣ್ಣಗಾಗಿಸುವಂತೆ ಮಾಡಿದ ಪ್ರಯತ್ನ ಫಲ ಕೊಟ್ಟಂತೆ ಕಾಣುತ್ತಿಲ್ಲ.ಸಿಎಂ, ಡಿಸಿಎಂ ಬೆಂಬಲಿಗರು ತಮ ನಾಯಕರುಗಳ ಪರವಾಗಿ ಧ್ವನಿ ಎತ್ತುತ್ತಲೇ ಇದ್ದಾರೆ. ಎಐಸಿಸಿ ಅಧ್ಯಕ್ಷರಾದ ಖರ್ಗೆಯವರು ಬೆಂಗಳೂರಿಗೆ ಬಂದು ಈ ಕುರಿತು ಪರಿಸ್ಥಿತಿ ಅವಲೋಕಿಸಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸಿದರು.

ಸಿಎಂ, ಡಿಸಿಎಂ ಅವರು ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎಂಬ ಹೇಳಿಕೆ ನೀಡಿದ್ದರು. ಆದರೆ ಅವರ ಆಪ್ತ ಬೆಂಬಲಿಗರು ಯಾಕೋ ಈ ವಿಷಯದಲ್ಲಿ ತಣ್ಣಗಾಗುತ್ತಿಲ್ಲ. ಬೆಂಗಳೂರಿನ ಉಪಾಹಾರ ಕೂಟಗಳು ಮುಗಿದ ಮೇಲೆ ಬೆಳಗಾವಿಯ ಅಧಿವೇಶನ ಸಂದರ್ಭದಲ್ಲಿ ನಡೆದ ಔತಣಕೂಟದಲ್ಲಿ ಮತ್ತೆ ನಾಯಕತ್ವದ ವಿಷಯಗಳು ಗರಿಗೆದರಿ ಪರಸ್ಪರ ಶಕ್ತಿ ಪ್ರದರ್ಶನಕ್ಕೆ ಕಾರಣವಾಗಿವೆ.ಸಿಎಂ ಸಿದ್ದರಾಮಯ್ಯ ಬೆಂಬಲಿಗರು ಸಭೆ ನಡೆಸಿದರೆ ಡಿಕೆಶಿ ಶಿವಕುಮಾರ್‌ರವರ ಬೆಂಬಲಿಗರಾದ 40ಕ್ಕೂ ಹೆಚ್ಚು ಶಾಸಕರು ಔತಣಕೂಟದ ನೆಪದಲ್ಲಿ ಶಕ್ತಿ ಪ್ರದರ್ಶನ ನಡೆಸಿದ್ದಾರೆ.ಬೆಳಗಾವಿಯ ಅಧಿವೇಶನದ ಸಂದರ್ಭದಲ್ಲಿ ಸಿಎಂ ಕುರ್ಚಿ ಕದನ ಕಾವೇರಿದೆ. ನಾಳೆ ದೆಹಲಿಯಲ್ಲಿ ಎಐಸಿಸಿ ವತಿಯಿಂದ ವೋಟ್‌ಚೋರಿ ಆಂದೋಲನ ನಡೆಯುತ್ತಿದ್ದು, ಅಲ್ಲೂ ಕೂಡ ಶಕ್ತಿ ಪ್ರದರ್ಶನ ನಡೆಸಲು ಬೆಂಬಲಿಗರು ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

ಸುಮಾರು 100 ಕ್ಕೂ ಹೆಚ್ಚು ಶಾಸಕರು, ವಿಧಾನಪರಿಷತ್ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳುತ್ತಿದ್ದು, ಹೈಕಮಾಂಡ್ ನಾಯಕರನ್ನು ಭೇಟಿಯಾಗಿ ನಾಯಕತ್ವದ ಸ್ಪಷ್ಟನೆಗೆ ಒತ್ತಾಯಿಸಲಿದ್ದಾರೆ.ಡಿ.ಕೆ.ಶಿವಕುಮಾರ್ ಬೆಂಬಲಿಗರು ಕೂಡ ಸಿಎಂ ಸ್ಥಾನಕ್ಕೆ ಪಟ್ಟು ಹಿಡಿದಿದ್ದು ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಲು ಮುಂದಾಗಿದ್ದಾರೆ.

## ಚಳಿಯ ಸುಳಿಯಲ್ಲಿ ಕರ್ನಾಟಕ, 15 ಡಿ.ಸೆ.ಗೆ ಕುಸಿದ ಕನಿಷ್ಠ ತಾಪಮಾನ



ಬೆಂಗಳೂರು,ಡಿ.13–ರಾಜ್ಯದಲ್ಲಿ ಮಾಗಿ ಚಳಿ ಹೆಚ್ಚಾಗಿದ್ದು, ಜನರು ತತ್ತರಿಸುವಂತೆ ಮಾಡಿದೆ. ಕರಾವಳಿ ಹೊರತುಪಡಿಸಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ 30 ಡಿ.ಸೆ.ಗಿಂತ ಕಡಿಮೆ ದಾಖಲಾಗುತ್ತಿದೆ. ಅದೇ ರೀತಿ ಕನಿಷ್ಠ ತಾಪಮಾನ ಸರಾಸರಿ 15 ಡಿ.ಸೆ.ಗಿಂತ ಕಡಿಮೆಯಾಗುತ್ತಿದೆ.

ಕರಾವಳಿ ಭಾಗದಲ್ಲಿ ಮಾತ್ರ ಕನಿಷ್ಠ ತಾಪಮಾನ 15 ಡಿ.ಸೆ.ಗಿಂತ ಹೆಚ್ಚಾಗಿದ್ದು, ಗರಿಷ್ಠ ತಾಪಮಾನವು 30 ಡಿ.ಸೆ.ಗಿಂತ ಹೆಚ್ಚಿದೆ. ಬಿಸಿಲ ನಾಡೆಂದೇ ಬಿಂಬಿಸಲಾಗುವ ಕಲ್ಯಾಣ ಕರ್ನಾಟಕ ಭಾಗ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ ಗಣನೀಯವಾಗಿ ಕುಸಿಯುತ್ತಿದ್ದು, ಮೈ ಕೊರೆಯುವ ಚಳಿ ಜನರನ್ನು ಬಾಧಿಸುತ್ತಿದೆ.

2ನೇಪುಟಕ್ಕೆ►

## ಸಿಂಧನೂರು ಶ್ರೀಕಾಳಿಕಾದೇವಿ ದೇವಸ್ಥಾನ ಶಂಕುಸ್ಥಾಪನೆ ಕಾರ್ಯಕ್ರಮ

ಧೈರ್ಯದ ದಾರಿ

**ಸಿಂಧನೂರು,ಡಿ.13–**ನಗರದ ಬಡೀಬೇಸ್ ಕಾಲೋನಿಯ ಪುರಾತನ ಕಾಲದ ಶ್ರೀಕಾಳಿಕಾದೇವಿ ದೇವಸ್ಥಾನವನ್ನು ಜೀರ್ಣ ದ್ದಾರ ಕಾರ್ಯ ಕೈಗೊಳ್ಳಲು ಸಿಂಧನೂರು ತಾಲೂಕ ವಿಶ್ವಕರ್ಮ ಸಮಾಜದ ವತಿಯಿಂದ ಶ್ರೀ ವೇ ಮೂ ನಾಗಲಿಂಗಚಾರ್ಯ ಬೇವಿನಹಾಳ ಇವರ ಪುರೋಹಿತ್ಯದಲ್ಲಿ ಹೋಮ- ಹವನ ಕಾರ್ಯಕ್ರಮ,ತಾಯಿ ಶ್ರೀ ಕಾಳಿಕಾದೇವಿ ಮೂರ್ತಿ ಸ್ಥಾನ ಪಲ್ಲಟ ಹಾಗೂ ಭೂಮಿ ಶಂಕು ಸ್ಥಾಪನೆ ಕಾರ್ಯಕ್ರಮ ಅತ್ಯಂತ ಅಚ್ಚುಕಟ್ಟಾಗಿ ತರ್ಕಬದ್ಧವಾಗಿ ವಿಜೃಂಭಣೆಯಿಂದ ಜರುಗಿತು.ಬೆಳಗ್ಗೆ ಶ್ರೀ ಕಾಳಿಕಾದೇವಿಗೆ ವಿಶೇಷ ಪೂಜೆ,ಹೋಮ–ಹವನ ಕಾಯ ರ್ಕ್ರಮ ನೆರವೇರಿತು.ಇದೇವೇಳೆ ಭಕ್ತಾಧಿಗಳು ತಮ್ಮ ಇಷ್ಟಾರ್ಥ ಸಿದ್ದಿಗಳು ಈಡೇರಲೆಂದು ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಂತರ ಮಹಾಪ್ರಸಾದ ನೆರವೇರಿತು.

ಈ ಸಂಧರ್ಭದಲ್ಲಿ ಶ್ರೀ ವೆಂಕಟೇಶ್ವರ ಮಹಾಸ್ವಾಮಿಗಳು ಏಕದಂಡಗಿ ಮಠ ಶಾಡಲಗೇರಿ,ಅಯ್ಯಪ್ಪ ಟಿ ನಿವೃತ್ತ ಃಇಔ ಹಿರಿಯ ಮುಖಂಡರು,ಸೋಮಣ್ಣ ಪತ್ತಾರ ಸುಕಲಪೇಟೆ ರಾಜ್ಯ ಕಾರ್ಯದರ್ಶಿಗಳು,ಅ.ಕ.ವಿ.ಮ.ಸಭೆ ಬೆಂಗಳೂರು.ವೀರೇಶ ದೇವರಗುಡಿ ಮುಖಂಡರು.ಮೌನೇಶ ತಿಡಿಗೋಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ತಾ.ವಿ.ಸಿಂಧನೂರು.ಮಂಜುನಾಥ ಕೊಟ್ನೆಕಲ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಶ್ರೀ ಕಾಳಿಕಾದೇವಿ ದೇವಸ್ಥಾನ ಟ್ರಸ್ಟ್ ಸಿಂಧನೂರು. ರವೀಂದ್ರ ಗದ್ರಟಗಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ತಾಲೂಕ ಕರ್ಪೆಂಟರ್ ಕ್ಷೇಮಾಭಿವೃದ್ಧಿ ಸಂಘ ಸಿಂಧನೂರು. ಮಂಕು ಸತ್ಯನಾರಾಯಣ ಅಧ್ಯಕ್ಷರು



ವೀರಬ್ರಹ್ಮೇಂದ್ರಸ್ವಾಮಿ ದೇವಸ್ಥಾನ ಸೇವಾ ಸಮಿತಿ,ಶಂಕ್ರಪ್ಪ ಸಾಹುಕಾರ ನಿಡಿಗೋಳ ಗೌರವ ಅಧ್ಯಕ್ಷರು,


ಸಿದ್ರಾಮಪ್ಪ ಇರಿ ಹೊಸಳ್ಳಿ, ವೀರಭದ್ರಪ್ಪ ಹಂಚಿನಾಳ ಮಾಜಿ ಅಧ್ಯಕ್ಷರು,ಷಣ್ಮುಖಪ್ಪ ಪತ್ತಾರ ಉಪಾಧ್ಯಕ್ಷರು,ಅಂಬಣ್ಣ ಪತ್ತಾರ ಗೋರೇಬಾಳ ಉಪಾಧ್ಯಕ್ಷರು,ತಿರುಮಲ ಆಚಾರ್ಯ ಗೆಜ್ಜೆಳ್ಳಿ ಉಪಾಧ್ಯಕ್ಷರು,ಸದಾಶಿವ ಬಡಿಗೇರ ಉಪಾಧ್ಯಕ್ಷರು,ಧರ್ಮಣ್ಣ ಪತ್ತಾರ ಗುಂಜಳ್ಳಿ ಪ್ರಧಾನ ಕಾರ್ಯದರ್ಶಿಗಳು,ಬಸವರಾಜ ಕಮತಗಿ ಕಾರ್ಯದರ್ಶಿಗಳು,ಮೌನೇಶ 2ನೇಪುಟಕ್ಕೆ►

## ಸಂಘಟನೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಸಂಘಟನೆಯನ್ನು ಗಟ್ಟಿಗೊಳಿಸಲು ಪ್ರಯತ್ನಿಸಿ: ಬಸವರಾಜ

ಧೈರ್ಯದ ದಾರಿ

**ಮಸ್ಕಿ,ಡಿ.13–** ಪಟ್ಟಣದ ಸರ್ಕ್ಯೂಟ್ ಹೌಸ್ ನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರವಾದ ಸಂಘಟನೆ ವತಿಯಿಂದ ತಾಲೂಕ ಮಟ್ಟದ ಸದಸ್ಯತ್ವ ನೊಂದಣಿ ಅಭಿಯಾನಕ್ಕೆ ತಾಲೂಕು ಪ್ರಧಾನ ಸಂಚಾಲಕ ಬಸವರಾಜ್ ಕೊಠಾರಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ನಮ್ಮ ಸಂಘಟನೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಸಂಘಟನೆಯನ್ನು ಗಟ್ಟಿಗೊಳಿಸಲು ತಾಲೂಕಿನಲ್ಲಿ ಹೆಚ್ಚು ಹೆಚ್ಚು ಜನರು ಸದಸ್ಯತ್ವ ನೋಂದಣಿ ಮಾಡಿಕೊಳ್ಳಬೇಕೆಂದು ತಿಳಿಸಿದರು ಅದೇ ರೀತಿಯಾಗಿ ಮುಂದಿನ ದಿನಮಾನಗಳಲ್ಲಿ ಮಸ್ಕಿ ತಾಲೂಕಿನಲ್ಲಿ ಮಹಿಳೆಯರು ಯುವಕರು ಸದಸ್ಯತ್ವ ನೊಂದಣಿ ಮಾಡಿಕೊಳ್ಳಲು ಮುಂದೆ ಬರಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಸ್ಕಿ ತಾಲೂಕಿನ ಮಹಿಳಾ ಪ್ರಧಾನ ತಾಲೂಕ ಸಂಘಟನೆ ಪ್ರಧಾನ ಸಂಚಾಲಕರಾಗಿ



ಸುಮಿತ್ರ ಸಾಗರ ಕ್ಯಾಂಪ್ ಇವರನ್ನು ಆಯ್ಕೆ ಮಾಡಲಾಯಿತು ಮಹಿಳೆಯರು ಹೆಚ್ಚು ಹೆಚ್ಚು ಸದಸ್ಯತ್ವ ನೋಂದಣಿ ಮಾಡಬೇಕೆಂದು ತಿಳಿಸಲಾಯಿತು ಕಾರ್ಯಕ್ರಮದಲ್ಲಿ ಕಲ್ಬುರ್ಗಿ ವಿಭಾಗಿ ಸಂಚಾಲಕರಾದ ಚನ್ನಪ್ಪ ಹೆಡಿಗಿಬಾಳ, ನಾಗಪ್ಪ ದಿನಸಮುದ್ರ, ಪರಶುರಾಮ್ ಹುಸ್ಕಿಹಾಳ್, ಹುಲಿಗೇಶ್ ಮುರಾರಿ, ಚಂದಪ್ಪ ಹಾಲಾಪುರ್, ಅರುಣ್ ಕುಮಾರ್ ಸಾಗರ್ ಕ್ಯಾಂಪ್, ಸೋಮಣ್ಣ ಮೇಟಿ, ರಾಮಣ್ಣ ಮಸ್ಕಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು

## ವಿಜ್ಞಾನ ವಸ್ತು ಪ್ರದರ್ಶನ: ವಿದ್ಯಾರ್ಥಿಗಳಿಂದ ವಿಜ್ಞಾನ ಲೋಕ ಅನಾವರಣ



ಧೈರ್ಯದ ದಾರಿ

**ಕೊಪ್ಪಳ,ಡಿ.13–** ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿ ಹುದುಗಿರುವ ಪ್ರತಿಭೆ, ಸೃಜನಾತ್ಮಕತೆ, ವೈಜ್ಞಾನಿಕ ಮನೋಭಾವ, ಕೌಶಲ ಹೊರಹೊಮ್ಮುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದ ಮಕ್ಕಳು ಮಾಡಿರುವ ನೂತನ ಮಾದರಿಗಳು ವೈಜ್ಞಾನಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ಸಂದೇಹವಿಲ್ಲ' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಗೌಡ ಪಾಟೀಲ ಹೇಳಿದರು.

ಇಲ್ಲಿನ ವಿದ್ಯಾಶ್ರೀ ಶಾಲೆಯಲ್ಲಿ ಶುಕ್ರವಾರ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

'ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಗಾದೆ ಮಾತಿನಂತೆ ವಿಜ್ಞಾನ ವಸ್ತು ಪ್ರದರ್ಶನದಿಂದ ಮಕ್ಕಳಲ್ಲಿನ ನೈಜತೆ, ಕ್ರಿಯಾತ್ಮಕ ಚಟುವಟಿಕೆ ಹಾಗೂ ಮಕ್ಕಳ ಸುಪ್ತ ಪ್ರತಿಭೆ ಅರಳುತ್ತದೆ. ಇಂದಿನ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕಿದೆ' ಎಂದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲ ವಿಷಯಗಳ ಜ್ಞಾನ ಬಹಳ ಅವಶ್ಯವಿದೆ. ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ನಿರ್ಲಕ್ಷ್ಯ ಮಾಡದೆ ಪ್ರತಿಯೊಂದು ವಿಷಯಗಳ ಅಧ್ಯಯನ ಮಾಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಸಾಧಿಸಬೇಕು ಅಂದರೆ ಜ್ಞಾನ ಸಂಪಾದಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ಜಸ್ವಂತ್‌ರಾವ್ ಜೈನ್ ಮಾತನಾಡಿ, 'ವಿಜ್ಞಾನ ವಿಷಯಗಳ ಮಾದರಿ ಪ್ರದರ್ಶನ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದರಿಂದ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನ ಪಡೆದುಕೊಳ್ಳಲು ಸಾಧ್ಯ. ಆದ್ದರಿಂದ ಎಲ್ಲ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಮುಂದೆ ಬರಬೇಕು' ಎಂದು ಹೇಳಿದರು.

ವಸ್ತು ಪ್ರದರ್ಶನದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ 2ನೇಪುಟಕ್ಕೆ►

## ಮಾಹಿತಿ ಕೊರತೆಯಿಂದ ವಿಕಲಚೇತನರಿಗೆ ಸರ್ಕಾರದ ಸೌಲಭ್ಯ ದೊರೆಯುತ್ತಿಲ್ಲ : ರಾಜಾ ವೆಂಕಟಪ್ಪ ನಾಯಕ




**ಮಾನ್ವಿ,ಡಿ.13–** ಪಟ್ಟಣದ ಟಿ.ಎ.ಪಿ.ಎಂ. ಸಿ.ಎಸ್. ಆವರಣದಲ್ಲಿ ಸಂಕಲ್ಪ ವಿಕಲಚೇ ತನರ ಒಕ್ಕೂಟ ರಾಯಚೂರು ವತಿಯಿಂದ ನಡೆದ ವಿಶ್ವ ವಿಕಲಚೇತನರ ದಿನಾಚರಣೆ–2025 ಕಾರ್ಯ ಕ್ರಮವನ್ನು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಉದ್ಘಾಟಿಸಿ ಮಾತನಾಡಿ ರಾಜ್ಯ ಸರ್ಕಾರವು ವಿಕಲಚೇ ತನರಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ ಹಾಗೂ ವಿವಿಧ ಯೋ ಜನೆಗಳ ಮೂಲಕ ಅನುದಾನವನ್ನು ಕೂಡ ನೀಡುತ್ತಿದೆ ಅದ್ದರೆ ಅವುಗಳು ವಿಕಲಚೇ ತನರಿಗೆ ದೊರೆಯದೆ ಇರುವುದಕ್ಕೆ ಮಾಹಿತಿ ಕೊರತೆಯು ಕೂಡ ಕಾರಣ ವಾಗಿರುವುದ ರಿಂದ ಸಂಕಲ್ಪ ವಿಕಲಚೇತ ನರ ಒಕ್ಕೂಟ ರಾಯಚೂರು ವತಿಯಿಂದ ವಿಕಲಚೇತನರಿಗೆ ಸರ್ಕಾರದಿಂದ ದೊರೆ ಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡುವುದಕ್ಕಾಗಿ ಕಾರ್ಯ ಕ್ರಮವನ್ನು ಅಯೋಜಿಸಲಾಗಿದೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ವಿಕಲಚೇ ತನರಿಗೆ ದೊರೆಯುವ ಸೌಲಭ್ಯಗಳನ್ನು ತಲುಪಿಸು ವುದಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಮಾಡಿದಾಗ ಮಾತ್ರ ವಿಕಲಚೇತನರು ಕೂಡ ಸ್ವಾವಲಂಭಿ ಜೀವನವನ್ನು ನಡೆಸು ವುದಕ್ಕೆ ಸಾಧ್ಯವಾಗುತ್ತದೆ ವಿಕಲಚೇತನರು ತಮ್ಮಲಿರುವ ಕೋರತೆಗಳಿಗೆ ಕೋರಗದೆ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡು ಉತ್ತಮ ಸಾಧನ 'ಯನ್ನು ತೋರಬೇಕು ಹಾಗೂ ಸಮಾಜ ಮುಖಿ ಕಾರ್ಯಕ್ರಮಗಳನ್ನು ಸಂಸ್ಥೆಯ ವತಿಯಿಂದ ಅಯೋಜಿಸುವ ಮೂಲಕ ಇತರರಿಗೆ ಮಾದರಿಯಾಗಬೇಕು 2ನೇಪುಟಕ್ಕೆ►

# ಗೃಹಲಕ್ಷ್ಮಿ ಯೋಜನೆಗೆ 1.28 ಕೋಟಿ ಮಹಿಳೆಯರ ನೋಂದಣಿ

**ಬೆಳಗಾವಿ,ಡಿ.13–** ಗೃಹಲಕ್ಷ್ಮಿ ಯೋಜನೆಯಡಿ ಇದುವರೆಗೂ ಒಟ್ಟು 52,416.17 ಕೋಟಿ ಹಣವನ್ನು ಡಿಬಿಟಿ ಮೂಲಕ ಫಲಾನುಭವಿಗಳಿಗೆ ಜಮೆ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿದ್ದಾರೆ.

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯಾದ್ಯಂತ ಗೃಹಲಕ್ಷ್ಮಿ ಯೋಜನೆಗೆ ಇದುವರೆಗೆ 1,28,59,073 ಕುಟುಂಬದ ಯಜಮಾನಿಯರು ನೋಂದಾಯಿಸಿಕೊಂಡಿದ್ದು, ಇದರಲ್ಲಿ 1,24,12,543 ಫಲಾನುಭವಿಗಳಿಗೆ ಒಟ್ಟು 52,416.17 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಡಿಬಿಟಿ ಮೂಲಕ ಜಮೆ ಮಾಡಲಾಗಿದೆ ಎಂದರು.

ಅಂದರೆ ಇಲ್ಲಿ ಪ್ರತಿ ಫಲಾನುಭವಿಗಳಿಗೆ ತಲಾ ಎರಡು ಸಾವಿರ ರೂಪಾಯಿಯಂತೆ ಈವರೆಗೆ 22 ಕಂತುಗಳಲ್ಲಿ ಒಟ್ಟು 44,000 ರೂ.ಗಳನ್ನು ಪಾವತಿ ಮಾಡಲಾಗಿದೆ. ಈವರೆಗೆ 52,416.17 ಕೋಟಿ ರೂ. ಹಣವನ್ನು ಜಮೆ ಮಾಡಲಾಗಿದೆ ಎಂದು ತಿಳಿಸಿದರು.ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿದ ಫಲಾನುಭವಿಗಳ ಪೈಕಿ 1,44,056 ಮಂದಿ ಮರಣ ಹೊಂದಿದ್ದಾರೆ ಎಂಬ ಶಾಸಕ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ಸಚಿವರು ಈ ಮಾಹಿತಿ ನೀಡಿದ್ದಾರೆ.




ಗೃಹಲಕ್ಷ್ಮಿ ಯೋಜನೆಗೆ ದಾಖಲೆ ಸಂಖ್ಯೆಯಲ್ಲಿ ಮಹಿಳೆಯರು ನೋಂದಾಯಿಸಿಕೊಂಡಿರುವುದು ಸರ್ಕಾರದ ಜನಪರ ಬದ್ಧತೆಯನ್ನು ತೋರಿಸುತ್ತದೆ. ಸಣ್ಣ ಅವಧಿಯಲ್ಲಿಯೇ 1.24 ಕೋಟಿಗೂ ಹೆಚ್ಚು ಫಲಾನುಭವಿಗಳಿಗೆ ಹಣ ಸಂದಾಯ ಮಾಡಿರುವುದು ಪ್ರಶಂಸನೀಯ.

ಈ ಯೋಜನೆಯಿಂದ ರಾಜ್ಯದ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಣೆಗೊಳ್ಳಲು ದೊಡ್ಡ ಮಟ್ಟದ ಕೊಡುಗೆ ಸಿಕ್ಕಿದೆ. ಡಿಬಿಟಿ ಮೂಲಕ ನೇರವಾಗಿ ಹಣ ವರ್ಗಾವಣೆಯಾಗುತ್ತಿರುವುದು ಯೋಜನೆಗೆ ಪಾರದರ್ಶಕತೆಯನ್ನು ತಂದಿದೆ ಎಂದು ಶಾಸಕ ದಿನೇಶ್ ಗೂಳಿಗೌಡ ಹೇಳಿದ್ದಾರೆ.

# ಸಂಗಮ ಸಿರಿ ಪ್ರಶಸ್ತಿಗೆ ಆಯ್ಕೆ

**ಹುಬ್ಬಳ್ಳಿ,ಡಿ13–** ಹಿರಿಯ ಸಾಹಿತಿ ಡಾ. ಸಂಗಮೇಶ ಹಂಡಿಗಿ ಅವರ ಸ್ಮರಣೆಯಲ್ಲಿ ಡಾ. ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನ ಕೊಡಮಾಡುವ ರಾಜ್ಯಮಟ್ಟದ ಪ್ರಶಸ್ತಿಗೆ ಈ ವರ್ಷ ಡಾ. ಬಸವರಾಜ ಸಾದರ ಹಾಗೂ ಡಾ. ಶಶಿಕಾಂತ್ ಪಟ್ಟಣ ಅವರು ಆಯ್ಕೆ ಆಗಿದ್ದಾರೆ.

ಡಾ. ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನ ಕಳೆದ ನಾಲ್ಕು ವರ್ಷಗಳಿಂದ ವಿವಿಧ ಸಾಹಿತ್ಯ ಕ್ಷೇತ್ರದ ಸಾಧಕರನ್ನು ಗುರುತಿಸಿ "ಸಂಗಮ ಸಿರಿ " ರಾಜ್ಯಮಟ್ಟದ ಪ್ರಶಸ್ತಿ ನೀಡುತ್ತ ಬಂದಿದೆ. ಈ ವರ್ಷ ವಚನ ಸಾಹಿತ್ಯ ಪೂರಕ ಸಾಹಿತ್ಯದಲ್ಲಿ ಕಾರ್ಯ ಮಾಡಿದವರಿಗೆ " ಸಂಗಮ ಸಿರಿ " ಪ್ರಶಸ್ತಿ ನೀಡಲು ನಿರ್ಧರಿಸಿದಂತೆ ಈ ಕ್ಷೇತ್ರದಲ್ಲಿ ಕಾರ್ಯ ಮಾಡಿದ ಆಕಾಶವಾಣಿ ನಿರ್ದೇಶಕರಾಗಿ ನಿವೃತ್ತರಾದ ಬೆಂಗಳೂರಿನ ಡಾ. ಬಸವರಾಜ ಸಾದರ ಹಾಗೂ ಮಹಾರಾಷ್ಟ್ರ ಪುಣೆಯ ವಿಜ್ಞಾನಿ ಡಾ. ಶಶಿಕಾಂತ್ ಪಟ್ಟಣ್ ಅವರನ್ನು ಆಯ್ಕೆ ಮಾಡಲಾಗಿದೆ.



ಇದೇ ಡಿ.28ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಜಿ. ಬಿ. ಗೌಡಪ್ಪಗೋಳ, ಗೌರವಾಧ್ಯಕ್ಷ ಗಣಪತಿ ಗಂಗೊಳ್ಳಿ, ಕಾರ್ಯಕ್ರಮ ಸಂಯೋಜಕ ಡಾ. ಪ್ರಭು ಗಂಜಿಹಾಳ ತಿಳಿಸಿದ್ದಾರೆ.

# ಹಣಕಾಸು ಹಾಗೂ ಸಹವಾಸ

ಅತ್ಯಂತ ಸುಧೀರ್ಘ ಕಾಲ ತನ್ನದೇ ಕಂಪನಿಯಲ್ಲಿ ತನಗೆ ಸೆಕ್ರೆಟರಿಯಾಗಿ ಕಾರ್ಯನಿರ್ವಹಿಸಿದ ಆಕೆ ಸೇವೆಯಿಂದ ನಿವೃತ್ತಿ ಹೊಂದುತ್ತಿದ್ದಳು. ಹಲವಾರು ವರ್ಷಗಳಿಂದ ನಂಬಿಕೆಯಿಂದ ಕಾರ್ಯನಿರ್ವಹಿಸಿದ್ದ ಆಕೆಗೆ ಕೆಲ ಲಕ್ಷಗಳಷ್ಟು ಹಣವನ್ನು ನೀಡಿ ಆಕೆ ಮುಂದೆ ತನ್ನ ಬದುಕಿನಲ್ಲಿ ಎಂದೂ ಹಣಕ್ಕಾಗಿ ಒದ್ದಾಡಬಾರದು ಎಂದು ಆತ ಇಚ್ಛಿಸಿದ.ಈ ಮಾತನ್ನು ಆತ ತನ್ನ ಸೆಕ್ರೆಟರಿಯಾಗಿದ್ದ ಆಕೆಗೆ ಹೇಳಿದಾಗ ಆಕೆ ಅತ್ಯಂತ ಆಶ್ಚರ್ಯದಿಂದ ಅಡ್ಡಡ್ಡ ತಲೆಯಾಡಿಸಿ ಬೇಡ ಬೇಡ... ನೀವೇಕೆ ತೊಂದರೆ ತೆಗೆದುಕೊಳ್ಳುವಿರಿ, ನನಗೆ ನನ್ನದೇ ಆದ ಹಣ ಇದೆ ಎಂದು ಹೇಳಿದಳು.

ಆಕೆಯ ಮಾತಿಗೆ ಕಂಪನಿಯ ಮಾಲೀಕ ಅದು ಹೇಗೆ ಸಾಧ್ಯ? ನೀನು ಕೇವಲ ಸಾವಿರಗಳಲ್ಲಿ ಸಂಬಳ ಎಣಿಸುತ್ತಿದ್ದೆ... ಅಂದಮೇಲೆ ಲಕ್ಷಗಳಲ್ಲಿ ಹಣವನ್ನು ಉಳಿಸಲು ಹೇಗೆ ಸಾಧ್ಯ? ಎಂದು ಅಚ್ಚರಿಯಿಂದ ಕೇಳಿದ

ನಸುನಗುತ್ತಾ ಆಕೆ ಈ ಎಲ್ಲ ವರ್ಷಗಳಲ್ಲಿ ನಾನು ನಿಮ್ಮ ಜೊತೆ ಮೀಟಿಂಗಗಳಲ್ಲಿ ಕೂರುತ್ತಿದ್ದೆ. ಯಾವ ರೀತಿ ನೀವು ಫೋನಿನಲ್ಲಿ ಹೊಲಗಳನ್ನು ಮತ್ತು ಸ್ಟಾಕ್ ಗಳನ್ನು ಕೊಳ್ಳುತ್ತಿದ್ದಿರೋ ಹಾಗೆಯೇ ನಾನು ಕೂಡ ಇದೇ ಕೆಲಸವನ್ನು ನನ್ನ ನಿಲುಕಿನ ಸಣ್ಣ ಪ್ರಮಾಣದಲ್ಲಿ ಮಾಡುತ್ತಿದ್ದೆ. ನಿಮ್ಮ ಪ್ರತಿಯೊಂದು ಚಲನವಲನವನ್ನು ಅಭ್ಯಸಿಸುತ್ತಿದ್ದ ನಾನು ನಿಮ್ಮ ಎಲ್ಲ ಕಾರ್ಯವೈಖರಿಯನ್ನು ನನ್ನದಾಗಿಸಿಕೊಂಡಿದ್ದೆ.

ನೀವು ಲಕ್ಷಗಳಲ್ಲಿ ವ್ಯವಹಾರ ಮಾಡಿದಾಗ ನಾನು ಸಾವಿರ ಗಳಲ್ಲಿ ವ್ಯವಹಾರ ಮುಗಿಸುತ್ತಿದ್ದೆ. ನೀವು ಕೋಟಿಗಳಲ್ಲಿ ವ್ಯವಹಾರ ಮಾಡಿದಾಗ ನಾನು ಲಕ್ಷಗಳಲ್ಲಿ ವ್ಯವಹಾರ ಮಾಡಿದೆ ಎಂದು ಅತ್ಯಂತ ಆತ್ಮವಿಶ್ವಾಸದಿಂದ ಹೇಳಿದಳು.

ಸ್ನೇಹಿತರೆ, ನಮ್ಮ ಸುತ್ತ ಯಾರಿದ್ದಾರೆ ಎಂಬುದು ಹೆಚ್ಚು ಮಹತ್ವವನ್ನು ಪಡೆದುಕೊಳ್ಳಲು ಕಾರಣ ಮೇಲಿನ ಘಟನೆ. ಕೆಲ ಜನರು ನಮ್ಮಲ್ಲಿರುವ ಶಕ್ತಿಯನ್ನು, ಹುಮ್ಮಸ್ಸನ್ನು ಧರಾಶಾಹಿಯಾಗುವಂತೆ ಮಾಡಿದರೆ ಮತ್ತೆ ಕೆಲವರು ನಾವು ನಮ್ಮ ಬದುಕಿನಲ್ಲಿ ಮೇಲೆ ಎದ್ದು ನಿಲ್ಲಲು ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

ಜೇನು ಹುಳಗಳು ಕೇವಲ ಹೂವಿನತ್ತ ಆಕರ್ಷಿತವಾಗುತ್ತವೆ.... ಯಾವಾಗಲೂ ನಿಮ್ಮ ಸುತ್ತ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ಜನರು ಇರಲಿ.... ನಕಾರಾತ್ಮಕತೆಯನ್ನು ಹರಡುವ ಜನರನ್ನು ದೂರವೇ ಇಡಿ.

ಜಾಣ ವ್ಯಕ್ತಿಗಳ ಸಹವಾಸವನ್ನು ನೀವು ಮಾಡಿದಾಗ ಮತ್ತಷ್ಟು ಜಾಣರಾಗುವಿರಿ.
ಉತ್ಸಾಹ ಮತ್ತು ಕಾರ್ಯತತ್ಪರತೆಯನ್ನು ಹೊಂದಿರುವ ಜನರ ಸಹವಾಸದಲ್ಲಿ ನೀವು ಮತ್ತಷ್ಟು ಹೆಚ್ಚಿನ ಸಾಧನೆಯನ್ನು ಮಾಡುತ್ತೀರಿ.
ಕನಸುಗಾರರೊಂದಿಗೆ ಸ್ನೇಹ ಬೆಳೆಸಿದರೆ ನೀವು ಕೂಡ ಮತ್ತಷ್ಟು ದೊಡ್ಡ ಕನಸುಗಳನ್ನು ಕಾಣುತ್ತೀರಿ ಹಾಗೂ ಅವುಗಳನ್ನು ನನಸು ಮಾಡಲು ಪ್ರಯತ್ನಿಸುತ್ತೀರಿ.
ಆದರೆ ಸದಾ ದೂರುವವರ, ಯಾವುದೇ ರೀತಿಯ ಒಳ್ಳೆಯ ಆಸೆ ಆಕಾಂಕ್ಷೆಗಳನ್ನು ಹೊಂದಿರದ, ಕನಸು ಮತ್ತು ಗುರಿಗಳು ಇಲ್ಲದ ಜನರೊಂದಿಗಿನ ಸಹವಾಸ ನಿಮ್ಮನ್ನು ನಕಾರಾತ್ಮಕತೆಯತ್ತ ಒಯ್ಯುತ್ತದೆ.
ನಿಮ್ಮ ಸ್ನೇಹಿತರ ವಲಯವನ್ನು ಜಾಣ್ಮೆಯಿಂದ ಆಯ್ದುಕೊಳ್ಳಿ.

ನಮ್ಮ ಜನಪದರು ಈ ಕಾರಣವನ್ನು ಇಟ್ಟುಕೊಂಡಿರುವ ಒಳ್ಳೆಯ ವರ ಸಹವಾಸವನ್ನು ಮಾಡಿ ಎಂದು ಹೇಳುತ್ತಾರೆ.
ಸರ್ವಜ್ಞ ಕವಿ ತನ್ನ ವಚನದಲ್ಲಿ ಸಜ್ಜನರ ಸಂಗವದು ಹೆಜ್ಜೆನು ಸವಿದಂತೆ ಎಂದು ಹೇಳಿದ್ದಾನೆ.
ಹೂವಿಂದ ಹೂವಿಗೆ ಸಾಗಿ ಮಕರಂದವನ್ನು ಸಂಗ್ರಹಿಸುವ ದುಂಬಿ ಎಂದು ಸಗಣಿ ಇಲ್ಲವೇ ಸಿಂಬಳದ ಬಳಿ ಹೋಗುವುದಿಲ್ಲ.
ಹಾಗೆಯೇ ಒಳ್ಳೆಯ ಸಹವಾಸ ಹೊಂದಿದವರು ಕೆಟ್ಟ ಹವ್ಯಾಸಗಳಿಗೆ ಬೀಳುವುದಿಲ್ಲ ಎಂಬುದನ್ನು ನೆನಪಿನಲ್ಲಿ ಇಡಬೇಕು.

ನಮ್ಮ ಬೆಳವಣಿಗೆಗೆ ಅವಶ್ಯಕವಾದ ಇಂಧನವನ್ನು ಪೂರೈಸುವ ಸ್ನೇಹಿತರ ಗುಂಪು ಮತ್ತು ವಾತಾವರಣ ನಮ್ಮದಾಗಲಿ, ಮತ್ತು ಅತ್ಯಂತ ಮುಖ್ಯವಾಗಿ ನೀವು ಕೂಡ ನಿಮ್ಮ ಸ್ನೇಹಿತರನ್ನುಉತ್ತಮ ಕೆಲಸಗಳನ್ನು ನಿರ್ವಹಿಸಲು ಅನುವಾಗುವಂತೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ.

**ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ ಗದಗ್**

## ಏರ್‌ಗನ್ ಅಭ್ಯಾಸದ ವೇಳೆ ಉದ್ಯಮಿಗೆ ತಾಗಿದ ಗುಂಡು ಕಾನೂನು ವಿದ್ಯಾರ್ಥಿ ಬಂಧನ

**ಬೆಂಗಳೂರು, ಡಿ.13–** ಮನೆಯ ಬಾಲ್ಕನಿಯಲ್ಲಿ ಏರ್‌ಗನ್ ಅಭ್ಯಾಸ ಮಾಡುತ್ತಿದ್ದ ವೇಳೆ ಆಕಸಿಕವಾಗಿ ಉದ್ಯಮಿಯೊಬ್ಬರಿಗೆ ತಗುಲಿದ್ದು, ಈ ಸಂಬಂಧ ಕಾನೂನು ವಿದ್ಯಾರ್ಥಿಯನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೃಷ್ಣರಾವ್ ಪಾರ್ಕ್ ಬಳಿಯ ನಿವಾಸಿ ಮೊಹಮದ್ ಅಫ್ಜಲ್ ಬಂಧಿತ ಆರೋಪಿ. ಈತ ನಗರದ ಕಾನೂನು ಕಾಲೇಜೊಂದರಲ್ಲಿ ಅಂತಿಮ ವರ್ಷದ ಎಲ್‌ಎಲ್‌ಬಿ ವ್ಯಾಸಂಗ ಮಾಡುತ್ತಿದ್ದಾನೆ. ಡಿ.10 ರಂದು ರಾತ್ರಿ ಬಾರ್‌ಗಳ ಮಾಲೀಕ ರಾಜಗೋಪಾಲ್ ಎಂಬುವವರು ಎಂದಿನಂತೆ ಸ್ನೇಹಿತರೊಂದಿಗೆ ಕೃಷ್ಣರಾವ್ ಪಾರ್ಕ್‌ನಲ್ಲಿ ವಾಯುವಿಹಾರ ಮಾಡುತ್ತಿದ್ದರು. ಆ ಸಮಯದಲ್ಲಿ ಪಾರ್ಕ್ ಬಳಿಯ ನಿವಾಸಿ ಅಫ್ಜಲ್ ಏರ್‌ಗನ್ ಅಭ್ಯಾಸ ಮಾಡುತಿ-ದ್ದಾಗ ಆಕಸಿಕವಾಗಿ ಗುಂಡು ರಾಜಗೋಪಾಲ ಅವರ ಕುತ್ತಿಗೆಗೆ ಹೊಕ್ಕಿ ಗಂಭೀರ ಗಾಯಗೊಂಡಿದ್ದಾರೆ. ತಕ್ಷಣ ಜೊತೆಯಲ್ಲಿದ್ದ ಸ್ನೇಹಿತರು ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆಗೆ ದಾಖಲಿಸಿದ್ದು, ಅದೃಷ್ಟವಶಾತ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸುದ್ದಿ ತಿಳಿದು ಬಸವನಗುಡಿ ಠಾಣೆ ಪೊಲೀಸರು ಸ್ಥಳಕ್ಕೆ ದಾವಿಸಿ ಘಟನಾ ಸ್ಥಳದ ಸುತ್ತಾಮುತ್ತಲಿನಲ್ಲಿರುವ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿದಾಗ ಪಾರ್ಕ್ ಸಮೀಪದ ಮನೆಯಿಂದ ಗುಂಡು ಹಾರಿರುವುದು ಗೊತ್ತಾಗಿದೆ.ಆ ಮನೆಯ ಬಳಿ ಹೋಗಿ ವಿಚಾರಿಸಿದಾಗ, ಕಾನೂನು ವಿದ್ಯಾರ್ಥಿ ಅಫ್ಜಲ್ ಮನೆಯೊಳಗೆ ಏರ್‌ಗನ್‌ನಿಂದ ಶೂಟಿಂಗ್ ಅಭ್ಯಾಸದ ವೇಳೆ ಗುರಿ ತಪ್ಪಿ ಕಿಟಕಿಯಿಂದ ಗುಂಡು ಹೊರ ಹೋಗಿದೆ ಎಂದು ಆತ ಹೇಳಿದ್ದಾನೆ

ಮೊದಲನೇ ಪುಟದಿಂದ

# ಚಳಿಯ ಸುಳಿಯಲ್ಲಿ ಕರ್ನಾಟಕ, 15 ಡಿ.ಸೆ.ಗೆ ಕುಸಿದ ಕನಿಷ್ಠ ತಾಪಮಾನ

ಹಿಂಗಾರು ಮಳೆ ಕೈಕೊಟ್ಟು ವಾಡಿಕೆಗಿಂತ ಕಡಿಮೆಯಾಗಿದೆ. ಅಲ್ಲದೆ ಮೇಲಿಂದ ಮೇಲೆ ಉಂಟಾದ ಚಂಡಮಾರುತಗಳ ಪ್ರಭಾವದಿಂದಲೂ ಆಗಾಗ್ಗೆ ಬೀಸಿದ ಶೀತ ಗಾಳಿ ಜನರನ್ನು ತತ್ತರಿಸುವಂತೆ ಮಾಡಿದೆ. ಮೈ ಕೊರೆಯುವ ಚಳಿಯ ಜೊತೆಗೆ ಆಗಾಗ್ಗೆ ಬೀಸುವ ಮೇಲೆ ಶೀತ ಗಾಳಿಗೆ ಜನರು ಹೈರಾಣರಾಗಿದ್ದಾರೆ. ಚಳಿಯಿಂದ ರಕ್ಷಣೆ ಪಡೆಯಲು ಬೆಚ್ಚನೆಯ ಹೊದಿಕೆಗಳ ಮೊರೆ ಹೋಗಿದ್ದಾರೆ. ಹವಾಮಾನ ವೈಪರೀತ್ಯದಿಂದಾಗಿ ಚಳಿಯ ಪ್ರಮಾಣ ವಾಡಿಕೆಗಿಂತ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಜನರು ಮುನ್ನಚ್ಚರಿಕೆ ವಹಿಸಿ ರಾತ್ರಿ ಹಾಗೂ ಮುಂಜಾನೆ ಬೆಚ್ಚನೆಯ ಉಡುಪುಗಳನ್ನು ಧರಿಸಿ ಕಾರ್ಯ ನಿರ್ವಹಿಸುವಂತೆ ಸಲಹೆ ಮಾಡಿದ್ದಾರೆ. ಬೆಳಗಾವಿಯಲ್ಲಿ ಕನಿಷ್ಠ ತಾಪಮಾನ 10.4 ಡಿ.ಸೆ, ಬೀದರ್ 7.8, ವಿಜಯಪುರ 7, ಧಾರವಾಡ 9, ಗದಗ 10.2, ಕಲಬುರಗಿ 13, ಹಾವೇರಿ 11.8, ಕೊಪ್ಪಳ 11.9, ರಾಯಚೂರು 9.6, ಆಗುಂಬೆ 10.6, ಬೆಂಗಳೂರು 13.3, ದೇವನಹಳ್ಳಿ ವಿಮಾನ ನಿಲ್ದಾಣ 14.7, ಚಿತ್ರದುರ್ಗ 14, ದಾವಣಗೆರೆ 10, ಹಾಸನ 8, ಚಿಂತಾಮಣಿ 8.4, ಮೈಸೂರು 15.4, ಶಿವಮೊಗ್ಗ 11.4 ಡಿ.ಸೆ.ನಷ್ಟು ಕನಿಷ್ಠ ತಾಪಮಾನ ದಾಖಲಾಗಿದೆ. ಗರಿಷ್ಠ ತಾಪಮಾನ 25ರಿಂದ 28 ಡಿ.ಸೆ.ನಷ್ಟು ದಾಖಲಾಗುತ್ತಿದೆ. ರಾಜಧಾನಿ ಬೆಂಗಳೂರಿನಲ್ಲೂ ಕೂಡ ಚಳಿಯ ಪ್ರಮಾಣ ತೀವ್ರಗೊಂಡಿದೆ. ಕೆಲವೆಡೆ ಬೆಳಗಿನ ಜಾವ ಮಂಜು ಮುಸುಕಿದ ವಾತಾವರಣ ಕಂಡುಬರುತ್ತಿದೆ. ರಾಜ್ಯದ ಬಹುತೇಕ ಕಡೆಗಳಲ್ಲಿ ಮುಂಜಾನೆ ಮಂಜು ಕವಿಯುವುದು, ಇಬ್ಬನಿ ಹೆಚ್ಚಾಗಿ ಬೀಳುವುದು ಕಂಡುಬರುತ್ತಿದೆ. ಕೆಲವೆಡೆ ದಟ್ಟ ಮಂಜು ಕೂಡ ಆವರಿಸುತ್ತಿದೆ. ವಾಹನ ಸವಾರರು ಇಂಥ ಕಡೆಗಳಲ್ಲಿ ಎಚ್ಚರಿಕೆಯಿಂದ ಚಾಲನೆ ಮಾಡಬೇಕೆಂ ಸಲಹೆಯನ್ನು ತಜ್ಞರು ಮಾಡಿದ್ದಾರೆ.

# ಸೋನಿಯಾ ಗಾಂಧಿ ಅಂಗಳಕ್ಕೆ ಕರ್ನಾಟಕ ಸಿಎಂ ಕುರ್ಚಿ ಚೆಂಡು

ನಾಳೆ ಸಿಎಂ, ಡಿಸಿಎಂ ದೆಹಲಿಗೆ ತೆರಳುತ್ತಿದ್ದು, ವೋಟ್‌ಚೋರಿ ಆಂದೋಲನ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದಾರೆ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಚರ್ಚಿಸುವ ಸಾಧ್ಯತೆ ಇದೆ. ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಯತೀಂದ್ರ ನೀಡಿದ ಹೇಳಿಕೆ ಹಾಗೂ ಅವರ ಬೆಂಬಲಿಗರ ಹೇಳಿಕೆ, ಡಿಕೆಶಿ ಬೆಂಬಲಿಗರು ನಡೆಸಿದ ಔತಣಕೂಟ ಸಂಬಂಧ ಹೈಕಮಾಂಡ್ ನಾಯಕರಿಗೆ ಪರಸ್ಪರ ದೂರು–ಪ್ರತಿದೂರುಗಳು ಸಲ್ಲಿಕೆಯಾಗಲಿವೆ ಎಂದು ತಿಳಿದುಬಂದಿದೆ.

ರಾಜ್ಯ ನಾಯಕತ್ವದ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದೀಯ ಮಂಡಳಿಯ ನಾಯಕಿ ಸೋನಿಯಾಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸುರ್ಜೆವಾಲ್ ಅವರು ನಡೆಸಿದ ಒಂದು ಸುತ್ತಿನ ಮಾತುಕತೆ ಅಪೂರ್ಣಗೊಂಡಿತ್ತು. ಈಗ ಮತ್ತೆ ಕುರ್ಚಿ ಕದನ ಜೋರಾಗಿದ್ದು, ನಾಯಕರು ಈಗ ಯಾವ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂಬುದನ್ನು ಕಾದುನೋಡಬೇಕು.
ಒಟ್ಟಾರೆ ಕಾಂಗ್ರೆಸ್‌ನ ಸಿಎಂ ಕುರ್ಚಿ ಸಮರ ಸದ್ಯಕ್ಕೆ ಬಗೆಹರಿಯುವ ಲಕ್ಷಣಗಳು ಕಂಡುಬರುತ್ತಿಲ್ಲ. ಬೆಳಗಾವಿ ಅಧಿವೇಶನ ಹಾಗೂ ಸಂಸತ್ ಅಧಿವೇಶನದ ನಂತರ ಏನಾಗುತ್ತದೋ ಕಾದು ನೋಡಬೇಕು.

# ಸಿಂಧನೂರು ಶ್ರೀಕಾಳಿಕಾದೇವಿ ದೇವಸ್ಥಾನ ಶಂಕುಸ್ಥಾಪನೆ ಕಾರ್ಯಕ್ರಮ

ಪ್ರಿನ್ಸ್ ಕಾರ್ಯದಶಿ ರ್ಗಳು,ಚನ್ನಪ್ಪ ಕೆ.ಹೊಸಹಳ್ಳಿ ಸಂಘಟನಾ ಕಾರ್ಯದ ರ್ಶಿಗಳು,ಮುತ್ತಣ್ಣ ಪತ್ತಾರ ಸಂಘಟನಾ ಕಾರ್ಯದಶಿ ರ್ಗಳು,ವಿಜಯ್ ಚಂದ್ರ ಆಚಾರ ಗೌರವಾಧ್ಯಕ್ಷರು,ವಿನೋದ ಕುಮಾರ ಕಾರ್ಯದರ್ಶಿಗಳು ಮೌನೇಶ ಪೈಂಟರ್, ಶ್ರೀ ಶಿವಾಚಾರ್ಯ ಅರ್ಚಕರು ವೇದಮೂರ್ತಿ ಶ್ರೀ ವೀರಬ್ರಹ್ಮೇಂದ್ರ ಸ್ವಾಮಿ ದೇವಸ್ಥಾನ.ಡಾ.ವೀರೇಶ ಬಡಿಗೇರ,ಶಶಿಕಾಂತ ಮುದಗಲ್, ಶಿರಸಪ್ಪ ಕಂಬಾರ ಜಾಲಿಹಾಳ, ಪಂಪಣ್ಣ ಕಂಬಾರ ಜಾಲಿಹಾಳ, ಕಾಶೀಪತಿ ಜವಳಗೇರಾ,ಗುರುಮೂರ್ತಿ ಕಾಂಚಗಾರ ತುರವಿಹಾಳ,ಮರಿಸ್ವಾಮಿ ಕಾಂಚಗಾರ ತುರವಿಹಾಳ ಅಧ್ಯಕ್ಷರು, ಮಾನಪ್ಪ ವಾಸ್ತು ಅಲಬಾನೂರು,ದೇವರಾಜ ಉಪ್ಪಳ,ಬಸವರಾಜ ಮುಕ್ಕುಂದಾ,ಶರಣಪ್ಪ ಸೋಮಲಾಪುರ, ಗಂಗಾಧರ ಪೆಂಟರ್, ವೀರೇಂದ್ರ ಸಾಲಗುಂದ,ಚಿದಾನಂದ ಬಡಿಗೇರ ಗೊರೇಬಾಳ, ಗಣೇಶ ಪತ್ತಾರ ಸುಕಲಪೇಟೆ,ಶಂಕರ್ ಆಚಾರಿ ಸಿಂಧನೂರು, ನರಸಿಂಹ ಎಲೆಕೂಡ್ಲಿಗಿ, ಶ್ರವಣ ಕುಮಾರ,ಪ್ರಕಾಶ ಮುಳ್ಳೂರು, ಈರಣ್ಣ ಕೋಟೆ,ಸಣ್ಣ ವೀರೇಶ ಪತ್ತಾರ ಸುಕಲಪೇಟೆ, ಶಂಕರ್ ಪತ್ತಾರ ಗುಂಜಳ್ಳಿ, ರಾಜು ಪತ್ತಾರ ಬಳಗಾನೂರು, ನಾಗರಾಜ ಗೊರೇಬಾಳ,ಮರಿಸ್ವಾಮಿ ಬಡಿಗೇರ,ಪಂಪಣ್ಣ ಪತ್ತಾರ ಕಲಮಂಗಿ, ಮೌನೇಶ ಶರಣಬಸವ ಗುಂಜಳ್ಳಿ,ಪ್ರಸನ್ನ ಪತ್ತಾರ ಸುಕಲಪೇಟೆ, ಮನು ಪೆಂಟರ್ ಸಾಲಗುಂದ,ರವಿಕುಮಾರ ಬೋರಮಳ,ಅಶೋಕ ಬಾದರ್ಲಿ,ಕಿರಣ್ ಪತ್ತಾರ ಎಲೆಕೂಡ್ಲಿಗಿ,ವೀರಭದ್ರ ಪತ್ತಾರ ಅಲಬನೂರು,ಮೌನೇಶ ಉಪ್ಪಲದೊಡ್ಡಿ,ಶಾಶ್ವತ ಕುರುಕುಂದ, ಮಂಜುನಾಥ ಉಪ್ಪಲದೊಡ್ಡಿ,ವೀರೇಶ ದಡೆಸೂಗೂರು,ನರಸಪ್ಪ ಪೂಜಾರಿ,ಚಿನ್ನಪ್ಪ ಯಚ್ಚರಪ್ಪ ಬಿಜಕಲ್ಲ,ಮೌನೇಶ ಭಾಗ್ಯಪ್ಪ ಪತ್ತಾರ, ಅಂಬಣ್ಣ ತುರವಿಹಾಳ,ವೀರೇಶ ತುರವಿಹಾಳ ಇದ್ದರು.

# ವಿಜ್ಞಾನ ವಸ್ತು ಪ್ರದರ್ಶನ: ವಿದ್ಯಾರ್ಥಿಗಳಿಂದ ವಿಜ್ಞಾನ ಲೋಕ ಅನಾವರಣ

ಪರಮಾಣುಗಳ ರಚನೆ, ವಾಯು ಮಾಲಿನ್ಯ ನಿಯಂತ್ರಣ, ರಕ್ತ ಗುಂಪುಗಳ ಮಾಹಿತಿ, ನೀರಿನ ಮಟ್ಟ ಸೂಚಕ, ನೀರಿನ ಶುದ್ಧಿಕರಣ, ಬೆಳೆ ಸಂರಕ್ಷಣಾ ಮಾದರಿ, ಸೋಲಾರ್ ಟ್ರ್ಯಾಕಿಂಗ್ ಸಿಸ್ಟಮ್, ಮಿಶ್ರ ಬೇಸಾಯ ಸೇರಿದಂತೆ ವಿವಿಧ ಬಗೆಯ ಮಾದರಿ ಪ್ರದರ್ಶನ ಆಕರ್ಷಕವಾಗಿತ್ತು.

ಪ್ರಶಸ್ತಿ ವಿವರ: ಪ್ರದರ್ಶನದಲ್ಲಿ ವೈಯಕ್ತಿಕ ಹಾಗೂ ಗುಂಪು ವಿಭಾಗವಾಗಿ ಮಾಡಲಾಗಿತ್ತು. ವೈಯಕ್ತಿಕ ವಿಭಾಗದಲ್ಲಿ 8 ತಂಡ, ಗುಂಪು ವಿಭಾಗದಲ್ಲಿ 8 ತಂಡ ಭಾಗವಹಿಸಿದ್ದವು.

ಸೋಮಶೇಖರಗೌಡ ಪಾಟೀಲ ಡಿಡಿಪಿಐ ಕೊಪ್ಪಳವಿದ್ಯಾರ್ಥಿಗಳು ಮಾಡಿರುವ ಚಿಕ್ಕ ಚಿಕ್ಕ ಪ್ರಯೋಗಗಳು ಮುಂದೆ ಅದ್ಭುತವಾದಂತಹ ಸಂಶೋಧನೆಗೆ ಕಾರಣವಾಗಬಹುದು. ಪ್ರತಿಯೊಬ್ಬರೂ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು. ಎಲ್.ಡಿ ಜೋಶಿ, ನಾಗರಾಜ್ ಜುಮ್ಮಣ್ಣವರ್, ಸೋಮಶೇಖರ್ ಹರ್ತಿ, ಮಹೇಶ್ ಸಬರದ, ಹೇಮಣ್ಣ ಕುಕನೂರ, ಜಾಕಿರ್ ಹುಸೇನ್ ಕೊಪ್ಪಳ, ಈರಣ್ಣ ಹೆಬ್ಬಾಳ್, ಸುರೇಶ್ ಬಳೂಟಗಿ ಇದ್ದರು.

# ಮಾಹಿತಿ ಕೊರತೆಯಿಂದ ವಿಕಲಚೇತನರಿಗೆ ಸರ್ಕಾರದ ಸೌಲಭ್ಯ ದೊರೆಯುತ್ತಿಲ್ಲ : ರಾಜಾ ವೆಂಕಟಪ್ಪ ನಾಯಕ

ಎಂದು ತಿಳಿಸಿದರು. ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮಾತ ನಾಡಿ ಭಗವಂತ ಸಾಮಾನ್ಯ ವ್ಯಕ್ತಿಗಳಿಗಿಂತ ಹೆಚ್ಚಿನ ಸಾಮಾರ್ಥ್ಯವನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡಿರುತ್ತಾನೆ ಇಂದು ವಿಕಲಚೇತನರು ಎಲ್ಲಾ ರಂಗಗಳಲ್ಲಿಯು ಕೂಡ ಉತ್ತಮ ಸಾಧನೆಯನ್ನು ತೋರು ತ್ತಿದ್ದಾರೆ ಪ್ಯಾರ ಓಲಂಪಿಕ್ ಕ್ರೀಡೆಗಳು ಇಂದು ಹೆಚ್ಚು ಜನಪ್ರಿಯವಾಗುತಿವೆ.ಅದ್ದರಿ ಂದ ಅತ್ಮವಿಶ್ವಸವನ್ನು ಕಳೆದುಕೊಳ್ಳದೆ ತಮ್ಮ ಬದುಕನ್ನು ಕಟ್ಟಿಕೊಳ್ಳುವಂತೆ ತಿಳಿಸಿದರು. ಹಿರಿಯ ಸಾಹಿತಿ ದೇವತರಾಜ್ ಎಸ್,ಬಪ್ಪೂರು ರವರು ವಿಶೇಷ ಉಪನ್ಯಾಸ ನೀಡಿದರು.

ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಸೈಯಾದ್ ಸಜ್ಜದ್ ಹುಸೇನಿ ಮತವಾಲೆ ಸಾಹೆಬ್ ಹಾಗೂ ಕ್ರೈಸ್ತ ಧರ್ಮ ಗುರುಗಳಾದ ಸೇಂಟೆ ಮೇರಿಸ್ ಕ್ಯಾಥೋಲಿಕ್ ಚರ್ಚ್ ಫಾ.ಸುರೇಶ ವಿನ್ಸೆಂಟ್ ದಿವ್ಯಸಾನಿಧ್ಯ ವಹಿಸಿ ತಮ್ಮ ಸಂದೇಶವನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಕಲಚೇತನರ ಸಬಲಿಕರಣ ಇಲಾಖೆಯ ಅಧಿಕಾರಿಗಳಾದ ವಿನೋದ ಕುಮಾರ, ಜೆ.ಡಿಎಸ್.ರಾಜ್ಯ ಯುವ ಘಟಕದ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ, ಮೌನೇಶಗೌಡ .ಹೆಚ್, ಗುಮ್ಮ ಬಸವರಾಜ,ಸೈಯಾದ್ ಖಾದ್ರಿ, ಪಿ.ರವಿಕುಮಾರ, ರಾಘವೇಂದ್ರ, ಆಂಜನೇಯ್ಯ,ಸುಬಾನ್ ಬೇಗ್, ಸಂಕಲ್ಪ ವಿಕಲಚೇತನರ ಒಕ್ಕೂಟದ ರಾಜ್ಯ ಪ್ರತಿನಿಧಿಗಳು ಜಿಲ್ಲಾ ಗೌ.ಅಧ್ಯಕ್ಷರಾದ ದೇಸಾಯಿ ದೊತರಬಂಡಿ, ಜಿಲ್ಲಾಧ್ಯಕ್ಷರಾದ ಶಿವಕುಮಾರ ಚಲ್ಮಲ್, ಜಿಲ್ಲಾ ಉಪಧ್ಯಾಕ್ಷರಾದ ಸಾವಿತ್ರಮ್ಮ ಹೆಚ್.ಎಂ. ತಾಲೂಕು ಅಧ್ಯಕ್ಷರಾದ ಲಕ್ಷ್ಮೀ ಉಟಕನೂರು,ಸಿರವಾರ ತಾ. ಅಧ್ಯಕ್ಷರಾದ ಅಮರೇಶಪಾಟೀಲ್ ಚಾಗಭಾವಿ,ಚಂದ್ರಶೇಖರ ಸೇರಿದಂತೆ ಇನ್ನಿತರರು ಇದ್ದರು.

# ಅಲ್ಪಸಂಖ್ಯಾತರ ಸಮುದಾಯದವರಿಗೆ ಯೋಜನೆಗಳಲ್ಲಿ 15 ಪ್ರತಿಶತ ಸೌಲಭ್ಯ ಒದಗಿಸಲು ಅಧಿಕಾರಿಗಳ ಸೂಚನೆ

**ಕಲಬುರಗಿ:ಡಿ.13–** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇತರ ಯೋಜನೆಗಳಾದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಪ್ರಧಾನ ಮಂತ್ರಿ ಮಾತ್ರ ವಂದನಾ ಯೋಜನೆ, ಮುಖ್ಯಮಂತ್ರಿ ಮಾತೃಶ್ರೀ ಯೋಜನೆ ಸ್ತ್ರೀ ಶಕ್ತಿ ಯೋಜನೆಗಳಲ್ಲಿ ಕಡ್ಡಾಯವಾಗಿ ಅಲ್ಪಸಂಖ್ಯಾತರ ಸಮುದಾಯದವರಿಗೆ ಯೋಜನೆಗಳಲ್ಲಿ 15 ಪ್ರತಿಶತ ಸೌಲಭ್ಯ ಒದಗಿಸಲು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಹೇಳಿದರು.

ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಭಾಗ್ಯಲಕ್ಷ್ಮೀ ಯೋಜನೆಯಡಿ ಪ್ರಸ್ತುತ ವರ್ಷ 407 ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಭಾಂಡ್ ವಿತರಿಸಲಾಗಿದೆ.

ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯಡಿ, ಗರ್ಭಿಣಿ ಮಹಿಳೆಯರಿಗೆ ವಾರ್ಷಿಕವಾಗಿ ಹಂತ ಹಂತವಾಗಿ ಅಲ್ಪಸಂಖ್ಯಾತರ ಗರ್ಭಿಣಿ ಮಹಿಳೆಯರಿಗೆ ಅನುದಾನ ಪ್ರಸುತ್ತ ವರ್ಷದಲ್ಲಿ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಯೋಜನೆ ಪಡೆದಿದ್ದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ಶರಣಪ್ಪ ಹೇಳಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, 15 ಅಂಶಗಳ ಯೋಜನೆಗಳ ವಿವಿಧ ಇಲಾಖೆಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಂಡು ಜನರಿಗೆ ಅರಿವು ಮೂಡಿಸಿ ಯೋಜನೆಗಳ ಲಾಭ ಪಡೆಯುವಂತೆ ಪ್ರೇರೇಪಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದರು.



ಜೈನ್, ಬುದ್ಧ ಕ್ರೀಶ್ಚಯನ್, ಸಿಖ್, ಪಾರ್ಸಿ, ವಿವಿಧ ಯೋಜನೆಳ ಲಾಭ ಪಡೆಯುವಂತೆ ನಿಗದಿಪಡಿಸಿದ ಗುರಿಗಳನ್ನು ನಿಗದಿತ ಅವಧಿಯೊಳಗೆ ಕಾರ್ಯಗತಗೊಳಿಸಿ ಗುರಿ ತಲುಪಲು ಅಧಿಕಾರಿಗಳಿಗೆ ಸೂಚಿಸಿದರು. ಸಮಿತಿ ಸದ್ಯರಾದ ಮಸ್ತಾನ ಬಿರಾದಾರ ಮಾತನಾಡಿ, ಅಲ್ಪಸಂಖ್ಯಾತರ ಹೆಚ್ಚಾಗಿ ವಾಸಿಸುವ ನಗರ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸುವಂತೆ ಕೆಲವೊಂದು ನಗರದ ಪ್ರದೇಶಗಳಲ್ಲಿ ಹೆಲ್ಪರ್, ವರ್ಕರಗಳು, ಅಂಗವನಾಡಿ ಮನೆಗಳಲ್ಲಿ ನಡೆಸುತ್ತಿದ್ದಾರೆ ಕೆಲವೊಂದು ಹಳ್ಳಿಗಳಲ್ಲಿ ಧನದ ಕೊಠಡಿಯಲ್ಲಿ ಮಕ್ಕಳಿಗೆ ಪಾಠ ಹೇಳಿತ್ತಿರುವುದು ಕಂಡು ಬಂದಿದೆ ಅಂಗನವಾಡಿ ಕೇಂದ್ರಗಳಿಗೆ ಒಳ್ಳೆಯ ಫುಡ್ ವಿತರಣೆ ಮಾಡಬೇಕು ಸಭೆಗೆ ಮಾಹಿತಿ ತಂದರು.

ಉರ್ದು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದು ಒಳ್ಳೆಯ ಶಿಕ್ಷಕರನ್ನು ನೇಮಿಸಬೇಕು ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆ ಮೂಲಭೂತ ಸೌಕರ್ಯಗಳು ಕೊರತೆ ಎಂದು ಕಾಣುತ್ತಿದೆ ಸಮಿತಿ ಸದಸ್ಯರಾದ ಲಕ್ಷ್ಮೀಕಾಂತ ಹೆಬ್ಬಾಳ ಹೇಳಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಅಂಗನವಾಡಿ ಮಕ್ಕಳಿಗೆ ಸರಿಯಾದ ಪೌಷ್ಠಿಕಾಂಶಯುಕ್ತ ಆಹಾರವನ್ನು ಒದಗಿಸಲು ಮತ್ತು ಮಕ್ಕಳಿಗೆ ಶಿಕ್ಷಣ ನೀಡಿವು ನಿಟ್ಟಿನಲ್ಲಿ ಒತ್ತು ನೀಡಲು ತಿಳಿಸಿದರು. ನಾನು ಮತ್ತು ಸಿ.ಇ.ಓ. ಅನಿರೀಕ್ಷ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳಿಗೆ ಪರಿಹರಿಸಲಾಗುವುದು ಎಂದು ಹೇಳಿದರು.

ಪೋಲಿಸ್ ಇಲಾಖೆಯಿಂದ ಸೌಹಾರ್ದತೆ ಸಭೆಗಳನ್ನು ಆಗಿಂದಾಗೆ ಮಾಡಲು ತಿಳಿಸಿದರು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ನಿಲಯ/ವಸತಿ ಶಾಲೆಗಳಲ್ಲಿ ಹೊಸದಾಗಿ ಹಾಸಿಗೆ ದಿಂಬು ಒದಗಿಸುವಂತೆ ಸೂಚಿಸಿದರು. ಚಳಿಕಾಗಲ ಇರುವುದರಿಂದ ಮಕ್ಕಳಿಗ ಅನುಕೂಲವಾಗುವಂತೆ ಬಿಸಿ ನೀರಿನ ವ್ಯವಸ್ಥೆ ಮಾಡಲು ತಿಳಿಸಿದರು ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ರುಚಿಕರವಾದ ಊಟ ನೀಡುವುದು ಮತ್ತು ವಸತಿ ನಿಲ್ಯಗಳು ಸ್ವಚ್ಛವಾಗಿಡಲು ಸೂಚಿಸಿದರು.ಸ್ವಸಹಾಯಕ ಸಂಘಗಳನ್ನು ಅಲ್ಪಸಂಖ್ಯಾತರ ಸಮುದಾಯದಲ್ಲಿ ರಚಿಸಲು ಅಗತ್ಯ ಕ್ರಮಕೈಗೊಳ್ಳಲು ಜಿಲ್ಲಾ ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಿದರು. ಇದರಿಂದ ಆರ್ಥಿಕ ಹಿಂದುಳಿದ ವರ್ಗದವರಿಗೆ ಜೀವನೋಪಾಯಕ್ಕೆ ಸಹಕಾರಿಯಾಗಿದ ಹೇಳಿದರು.

ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ರೇಷ್ಮೆ ಇಲಾಖೆಯಿಂದ ಜಾರಿಯಾಗುತ್ತಿರುವ ವಿವಿಧ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿ. ವಿಶೇಷವಾಗಿ ತೋಟಗಾರಿಕೆ ಇಲಾಖೆಯ ವಿವಿಧ ಬೆಳೆಗಳ ಬಗ್ಗೆ ಪ್ರಚಾರ ಮಾಡಿ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದರು. ಹೊಸದಾಗಿ ನಾಮನಿರ್ದೇಶನಗೊಂಡ ಸದಸ್ಯರ ಸಹಕಾರ ಪಡೆದು ಪ್ರಧಾನ ಮಂತ್ರಿಗಳ ಕಾರ್ಯಕ್ರಮಗಳನ್ನು ಹೆಚ್ಚಿನ ಮಟ್ಟದಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಸಿ.ಇ.ಓ. ತಮ್ಮ ಇಲಾಖೆಯ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರ ಇತರ ಸಮುದಾಯಗಳ ) ಜೈನ್. ಬುದ್ಧ್, ಕ್ರಿಶ್ಚಿಯನ್‌ಗಳ ಸಿಖ್, ಪಾರ್ಸಿ) ಫಲಾನುಭವಿಗಳೀಗೆ ಮಾಹಿತಿ ಸಲ್ಲಿಸಲು ತಿಳಿಸಿದರು.ಸಭೆಯಲ್ಲಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಡೂರು, ಶ್ರೀನಿವಾಸಲು, ಡಿ.ಸಿ.ಪಿ. ಕನಿಕಾ ಸಿಕ್ರಾವಾಲ, ಕಲಬುರಗಿ ಸಹಾಯಕ ಆಯುಕ್ತೆ ಸಾಹಿತ್ಯ ಆಲದ ಕಟ್ಟಿ ಸೇರಿದಂತೆ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎಸ್.ಎಸ್. ಮಠಪತಿ,, ಕೃಷಿ ಇಲಾಖೆ ಜಂಟಿ ನಿರ್ದೇಶಕ ಸಮದ್ ಪಟೇಲ್, ತೋಟಗಾರಿಕೆ ಇಲಾಖೆ ಯ ಉಪನಿರ್ದೇಶಕ ಸಂತೋಷ ಇನಾಮಾಂದರ, ಜಿಲ್ಲಾಮಟ್ಟ ಅಧಿಕಾರಿಗಳು ನಾಮನಿರ್ದೇಶನಗೊಂಡ ಸದಸ್ಯರು ಹಾಜರಿದ್ದರು.

## ಮೀನುಗಾರಿಕೆ ಸಹಕಾರ ಸಂಘಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ವಿಶೇಷ ತರಬೇತಿ



**ಬೀದರ,ಡಿ.13–** ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ಬೆಂಗಳೂರು, ಬೀದರ ಜಿಲ್ಲಾ ಸಹಕಾರ ಯೂನಿಯನ್ ಬೀದರ, ಮೀನುಗಾರಿಕೆ ಇಲಾಖೆ, ಬೀದರ ಮತ್ತು ಸಹಕಾರ ಇಲಾಖೆ, ಬೀದರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಬೀದರ ಬೀದರ ಜಿಲ್ಲೆಯಲ್ಲಿ ಬರುವ ಮೀನುಗಾರಿಕೆ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮದ ಶಿಬಿರವನ್ನು ಮೀನುಗಾರಿಕೆ ಇಲಾಖೆಯ ಸಭಾಂಗಣ, ಬಿ.ವಿ.ಬಿ ಕಾಲೇಜು, ಎದುರುಗಡೆ, ಬೀದರನಲ್ಲಿ ನಡೆಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ ನಾರಾಯಣರಾವ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಜಿಲ್ಲಾ ಸಹಕಾರ ಯೂನಿಯನ್ನಿನವರು ನಡೆಸುತ್ತಿರುವ ಸದರಿ ಕಾರ್ಯಕ್ರಮವು ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ತರಬೇತಿ ನೀಡುವುದಾಗಿದೆ. ಸದರಿ ಕಾರ್ಯಕ್ರಮದಲ್ಲಿ "ತರಬೇತಿ" ಗೆ ಹೆಚ್ಚಿನ ಪ್ರಾಶಸ್ತ ನೀಡಬೇಕು. ತರಬೇತಿಯು ಪ್ರತಿಯೊಬ್ಬರಿಗೂ ಅವಶ್ಯವಿದೆ. ಸರಕಾರದ ವತಿಯಿಂದ ದೊರೆಯುವ ವಸತಿ ಸೌಲಭ್ಯ , ವಾಹನ ಸೌಲಭ್ಯಗಳಾಗಲಿ ದೊರಕಿಸಿಕೊಡುತ್ತೇನೆ ಎಂದರು. ಮೀನುಗಾರಿಕೆ ಸಹಕಾರ ಸಂಘದವರೆಲ್ಲರೂ ಒಟ್ಟಾಗಿ ಸೇರಿ ಕೆಲಸ ನಿರ್ವಹಿಸಿ ಸದಸ್ಯರೆಲ್ಲರೂ ಕೂಡಿ ವ್ಯವಹಾರ ಮಾಡಬೇಕು. ತಾವು ಬೆಳೆಸುವ ಮೀನುಗಳ ವ್ಯಾಪಾರವನ್ನು ಬೇರೆ ದೇಶಗಳಿಂದ ರಫ್ತು ಮಾಡುವ ಬದಲು ಸ್ವತಃ ತಾವುಗಳು ಕೆಲಸ ಮಾಡಿ ಲಾಭವನ್ನು ಹಂಚಿಕೊಂಡಾಗ ಆರ್ಥಿಕವಾಗಿ ಸದೃಡರಾಗುತ್ತಾರೆ ಎಂದು ತಿಳಿಸಿದರು.

ಮುಖ್ಯಅತಿಥಿಗಳಾದ ಬೀದರ ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಡಾ.ನೀಲಾಂಬಿಕಾ ಅವರು ಮಾತನಾಡುತ್ತಾ ಮೀನುಗಾರಿಕೆ ಸಹಕಾರ ಸಂಘಗಳ ಸಂಖ್ಯೆ ಹೆಚ್ಚಿಸಬೇಕು. ಕಾನೂನು ರೀತಿಯಲ್ಲಿ ಸಹಕಾರ ಸಂಘಗಳನ್ನು ನಡೆಸಿಕೊಂಡು ಹೋಗಬೇಕು ಎಂದರು. ಸಂಘಗಳ ಚುನಾವಣೆ ನಡೆಸುವ ಸಂದರ್ಭದಲ್ಲಿ ಉಪನಿಬಂಧಕರ ಕಛೇರಿಗೆ ಮಾಹಿತಿ ನೀಡಬೇಕು ಎಂದರು. ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ ಎಂಬುದು ಸಹಕಾರದ ತತ್ವವಾಗಿದೆ ಎಂದು ಹೇಳಿದರು.

ಮುಖ್ಯಅತಿಥಿಗಳಾದ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಜಾನಮ್ಮ ಇವರು ಮೀನುಗಾರಿಕೆ ಇಲಾಖೆಯಿಂದಲೂ ತರಬೇತಿ ನೀಡುತ್ತೇವೆ. ತರಬೇತಿಯಲ್ಲಿ ಪಾಲ್ಗೊಂಡು ಅದರ ಸದುಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು. ಮೀನುಗಾರಿಕೆ ಇಲಾಖೆಯ ಅಧಿಕಾರಿಗಳ ಜೊತೆ ಒಳ್ಳೆಯ ಸಂಪರ್ಕ ಬೆಳೆಸಿಕೊಳ್ಳಿ ಅಂದಾಗ ಮಾತ್ರ ಸಂಘಗಳ ಬೆಳವಣಿಗೆಗೆ ಸಹಾಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕರಾದ ಅಭಿಶೇಕ ಆರ್ ಪಾಟೀಲ ಅವರು ಮಾತನಾಡುತ್ತ ಬೀದರ ಜಿಲ್ಲಾ ಸಹಕಾರ ಯೂನಿಯನ್ ತರಬೇತಿಗಳನ್ನು ನೀಡುತ್ತಿದೆ. ಅಂತಹ ತರಬೇತಿಗಳಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೀದರ ಜಿಲ್ಲಾ ಸಹಕಾರ ಯೂನಿಯನ್ನಿನ ಉಪಾಧ್ಯಕ್ಷರಾದ ವೈಜಿನಾಥ ಅಣ್ಣೆಪ್ಪಾ ಆನಚಿದೆ, ನಿರ್ದೇಶಕರಾದ ಗುಂಡಪ್ಪಾ ಹಣಮಂತಪ್ಪಾ , ಶ್ರೀನಿವಾಸರೆಡ್ಡಿ, ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕರಾದ ಗೌತಮ ಸಇಲ್, ಗಣೇಶ ಉಪಸ್ಥಿತರಿದ್ದರು. ಬಳ್ಳಾರಿಯ ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಶರಣಬಸವ ಅವರು ಮೀನುಗಾರಿಕೆ ಇಲಾಖೆಯಿಂದ ಸಿಗುವ ಸೌಲಭ್ಯಗಳು ಹಾಗೂ ಮೀನುಗಳ ಸಂರಕ್ಷಣೆ ಕುರಿತು" ಬಸಣ್ಣ ರಾಠೋಡ, ಉಪನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಉಪ ನಿರ್ದೇಶಕ ಬಸಣ್ಣ ರಾಠೋಡ್ ಅವರು " ಸಹಕಾರ ಸಂಘಗಳ ಲೆಕ್ಕಪತ್ರ ನಿರ್ವಹಣೆ ಕುರಿತು" ಸೌಹಾರ್ದ ತರಬೇತಿ ಕೇಂದ್ರದ ನಿರ್ದೇಶಕ ಸುಬ್ರಮ್ಮಣ್ಯ ಪ್ರಭು ಅವರು " ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು" ಇವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಸ್ವಾಗತ ಜಿಲ್ಲಾ ಸಹಕಾರ ಶಿಕ್ಷಕ ಮಾರುತಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಹೆಚ್. ಆರ್. ಮಲ್ಲಮ್ಮ ವಂದನಾರ್ಪಣೆ ನಡೆಸಿಕೊಟ್ಟರು.

## ವಿದ್ಯಾರ್ಥಿಗಳ ವ್ಯಾಪಾರ ಕೌಶಲ ಅನಾವರಣ

**ಬೀದರ್:ಡಿ.13–**ನಗರದ ನೌಬಾದ್‌ನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ವಾಣಿಜ್ಯ ಉತ್ಸವದಲ್ಲಿ ವಿದ್ಯಾರ್ಥಿಗಳ ವ್ಯಾಪಾರ ಕೌಶಲ ಅನಾವರಣಗೊಂಡಿತು.ಬಿ.ಕಾಂ. ಹಾಗೂ ಬಿ.ಬಿ.ಎ. ವಿದ್ಯಾರ್ಥಿಗಳು ವಿವಿಧ ವಸ್ತುಗಳ ಮಳಿಗೆಗಳನ್ನು ತೆರೆದು ವ್ಯಾಪಾರ ನಡೆಸಿದರು.

ಫ್ರೂಟ್ ಸಲಾಡ್, ಕರಿದ ತಿನಿಸು, ಸಿಹಿ ತಿನಿಸು, ಪಾನೀಯ, ವಿವಿಧ ಸಾಮಗ್ರಿಗಳು ಮಳಿಗೆಗಳಲ್ಲಿ ಇದ್ದವು. ಇದೇ ವೇಳೆ ಮನೋರಂಜನಾ ಕ್ರೀಡೆಗಳೂ ನಡೆದವು.ಉತ್ಸವ ಉದ್ಘಾಟಿಸಿದ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಮಹಾಂತಯ್ಯ ಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳ ಸೃಜನಶೀಲತೆ, ವ್ಯವಹಾರ ಹಾಗೂ ಮಾರ್ಕೆಟಿಂಗ್ ಕೌಶಲ ಅನಾವರಣಕ್ಕೆ ಉತ್ಸವ ಸಹಕಾರಿಯಾಗಿದೆ ಎಂದು ಹೇಳಿದರು.



ಪ್ರಾಚಾರ್ಯ ಶಂಕರ ಅಧ್ಯಕ್ಷತೆ ವಹಿಸಿದ್ದರು. ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಡಾ. ನಾಗರಾಜ ಕುಲಕರ್ಣಿ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಶ್ರೀಕಾಂತ ಪಾಟೀಲ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಪ್ರೇಮಲತಾ ಮುನ್ನೋಳಿ, ಉಪನ್ಯಾಸಕಿ ನಗ್ಮಾ ಸೋಹಾ ಮತ್ತಿತರರು ಇದ್ದರು.

## ನಿರ್ಮಲ ತುಂಗಭದ್ರಾ ಅಭಿಯಾನ : ವಿದ್ಯಾರ್ಥಿಗಳಲ್ಲಿ ಜಾಗೃತಿ

ಧೈರ್ಯದ ದಾರಿ

**ಮಾನ್ವಿ,ಡಿ.13–** ತುಂಗಭದ್ರಾ ನದಿಯ ಮಾಲಿನ್ಯದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮತ್ತು ನದಿಯನ್ನು ಪುನರುಜ್ಜೀವನಗೊಳಿಸಲು ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನ ನೇತೃತ್ವದಲ್ಲಿ 'ನಿರ್ಮಲ ತುಂಗಭದ್ರಾ ಅಭಿಯಾನ'ದ ಮೂರನೇ ಹಂತದ ಪಾದಯಾತ್ರೆ ಇದೀಗ ಮಹತ್ವದ ಘಟ್ಟ ತಲುಪಿದೆ. ಗಂಗಾವತಿಯಿಂದ ಮಂತ್ರಾಲಯದ ತನಕ ಈ ಹಂತದ ಪಾದಯಾತ್ರೆ ನಡೆಯಲಿದೆ. ಇದರ ಭಾಗವಾಗಿ ಅಭಿಯಾನದ ತಂಡದ ಸದಸ್ಯರು ಶನಿವಾರ ನಗರದ ಸರ್ವೋದಯ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

ಸಮೀಕ್ಷಾ ವರದಿಯು ತೀವ್ರ ಆತಂಕ ಮೂಡಿಸಿದ್ದು, ನದಿ ನೀರಿನಲ್ಲಿ ಅಲ್ಯೂಮಿನಿಯಂ ಅಂಶ ಮತ್ತು ಇತರೆ ವಿಷಕಾರಿ



ತ್ಯಾಜ್ಯಗಳು ಮಿತಿಮೀರಿರುವುದು ದೃಢಪಟ್ಟಿದೆ. ನದಿಗೆ ಒಳಚರಂಡಿ ಮತ್ತು ಕೈಗಾರಿಕಾ ತ್ಯಾಜ್ಯಗಳು ನಿರಂತರವಾಗಿ ಸೇರುತ್ತಿರುವುದರಿಂದ, ಸರ್ಕಾರವು ಕೂಡಲೇ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳದಿದ್ದರೆ, ತುಂಗಭದ್ರಾ ನದಿಯು ಬೆಂಗಳೂರಿನ ಸಂಪೂರ್ಣ ಕಲುಷಿತಗೊಂಡ ವೃಷಭಾವತಿ ನದಿಯಂತಾಗುವ ಅಪಾಯವಿದ್ದು ಈ ಹೋರಾಟದಲ್ಲಿ ರೈತರು, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಪರಿಸರ ಪ್ರಿಯರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಭಿಯಾನದ ಜಿಲ್ಲಾ ಸಂಚಾಲಕ ಉದಯ ಕುಮಾರ್, ಪರಿಸರ ಪ್ರೇಮಿ ಲೋಕೇಶಪ್ಪ, ತಾಲೂಕ ಸಂಚಾಲಕ ರಾಘವೇಂದ್ರ ಚೌಡ್ಕಿ, ಸುರೇಶ ಚೇತನ್,ಅನೀತಾ ನವಲಕಲ್, ನಿವೇದಿತಾ, ಸರ್ವೋದಯ ನರ್ಸಿಂಗ್ ಕಾಲೇಜಿನ ಪ್ರಾಚರ್ಯರು ಶಿವಕುಮಾರ್, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

## ಈಡಿಗ ಒಳ ಪಂಗಡಗಳ ಏಳ್ಗೆಗಾಗಿ ಜ.6 ರಿಂದ 700 ಕಿಮೀ.ಐತಿಹಾಸಿಕ ಪಾದಯಾತ್ರೆ: ಡಾ.ಪ್ರಣವಾನಂದ ಸ್ವಾಮೀಜಿ



ಧೈರ್ಯದ ದಾರಿ

**ಸಿಂಧನೂರು,ಡಿ.13–** ಕರ್ನಾಟಕ ರಾಜ್ಯದಲ್ಲಿ ಈಡಿಗ ಬಿಲ್ಲವ, ನಾಮಧಾರಿ, ಧೀವರ, ತೀಯ ಸೇರಿ, 26 ಒಳ ಪಂಗಡಗಳ ಸಮಾಜದ ಬೇಡಿಕೆ ಈಡೇರಿಕೆಗಾಗಿ ಜ.6 ರಿಂದ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠದಿಂದ ಕರದಾಳದಿಂದ ಬೆಂಗಳೂರಿನವರೆಗೆ 700 ಕಿ.ಮೀ.41ದಿನ ಐತಿಹಾಸಿಕ ಪಾದಯಾತ್ರೆ ನಡೆಯಲಿದೆ ಎಂದು ಡಾ. ಪ್ರಣವಾನಂದ ಪರಮಪೂಜ್ಯ ಸ್ವಾಮಿಜಿ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ 40 ರಿಂದ 50 ಲಕ್ಷ ಜನರಿದ್ದೇವೆ, ಮಂಗಳೂರು, ಶಿವಮೊಗ್ಗ, ಉಡುಪಿ, ಕಾರವಾರ, ಜಿಲ್ಲೆಗಳಲ್ಲಿ ದೊಡ್ಡ ಮಟ್ಟದ ಸಮುದಾಯವಿದೆ. 23 ವಿಧಾನ ಸಭಾ ಕ್ಷೇತ್ರದಲ್ಲಿ 17 ವಿಧಾನಸಭಾ ಕ್ಷೇತ್ರದಲ್ಲಿ 1 ರಿಂದ 1.50 ಲಕ್ಷ ಜನರಿರುವ ಸಮುದಾಯವಾಗಿದೆ. ಈಗಿನ ಆಡಳಿತ ಪಕ್ಷದಲ್ಲಿ 4 ಜನ ಶಾಸಕರು, 2 ಜನ ಎಂಎಲ್ಸಿ, ಜೊತೆಗೆ ಒಬ್ಬರು ಮಂತ್ರಿ ಇದ್ದಾರೆ. ಈಡಿಗ ಸಮುದಾಯದ ಕುಲ ಕಸುಬು ಸೇಂದಿ ಇಳಿಸಿ ಮಾರಾಟ ಮಾಡಿ ಬದುಕುವ ಸಮಾಜ, ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಿನ ಅಬಕಾರಿ ಸಚಿವರಾಗಿದ್ದಾಗ ಸೇಂದಿಯಲ್ಲಿ ಸಿ.ಎಚ್.ಪೌಡರ್ ಹಾಕಿ ಮಾರಾಟ ಮಾಡುವುದು ಅಪರಾಧವೆಂಬ ಒಂದೇ ನೆಪವೊಡ್ಡಿ ಸಮಾಜದ ಕುಲ ಕಸುಬನ್ನೇ ಬಂದ್ ಮಾಡಿದರು.

ಆದರೆ ಯಾವುದೇ ಪರ್ಯಾಯದ ವ್ಯವಸ್ಥೆ ಮಾಡಲಿಲ್ಲ ರಾಜ್ಯದಲ್ಲಿ ನಿಕ್ಕರ್, ಪಬ್, ಗುಟ್ಕಾ, ಎಲ್ಲವೂ ಇದೆ, ಇದ್ಯಾಯಾವುದನ್ನು ಬಂದ್ ಮಾಡದೇ, ಬರೀ ಸೇಂದಿಯನ್ನಷ್ಟೇ ಬಂದ್ ಮಾಡಿ, ಸಮಾಜವನ್ನು ಆರ್ಥಿಕವಾಗಿ ಕುಗ್ಗುವಂತೆ ಮಾಡಿದರು. ಹೀಗಾಗಿ 2004 ರಿಂದ ಸೇಂದಿ ಮಾರಾಟ ನಿಂತು ಹೋಯಿತು. 2007 ರಲ್ಲಿ ಕುಮಾರಸ್ವಾಮಿ ಸರ್ಕಾರ ಸರಾಯಿ ಕೂಡ ಬಂದ್ ಮಾಡಿತು. ಈ ಕಾರಣದಿಂದ ಕಲ್ಯಾಣ ಕರ್ನಾಟಕದ ಈಡಿಗರು ಸಂಪೂರ್ಣವಾಗಿ ಬಡತನಕ್ಕೆ ಒಳಪಟ್ಟರು.

ಇದಕ್ಕೆಲ್ಲ ಕಾರಣ ಸರ್ಕಾರ ಜೊತೆಗೆ ಒಂದಷ್ಟು ನಮ್ಮ ಸಮುದಾಯದ ಮೇಲ್ವರ್ಗದವರು ಕಾರಣವಾಗಿದ್ದಾರೆ. ಹೀಗಾಗಿ ನಿರಂತರವಾಗಿ 5 ವರ್ಷಗಳಿಂದ ರಾಜ್ಯದಲ್ಲಿ ಅಷ್ಟೇ ಅಲ್ಲದೇ, 6 ರಾಜ್ಯಗಳಲ್ಲಿಯೂ ಸಹ ಹೋರಾಟ ನಡೆಸಿದ್ದೇವೆ, 2023 ರಲ್ಲಿ ಮಂಗಳೂರಿನಿಂದ ಹಿಡಿದು ಬೆಂಗಳೂರಿನವರೆಗೆ ಐತಿಹಾಸಿಕ ಪಾದಯಾತ್ರೆಯನ್ನು ಕೂಡ ನಡೆಸಿದ್ದೇವು.

ಈ ನಿಟ್ಟಿನಲ್ಲಿ ಮತ್ತೆ ಈಡಿಗ ಸೇರಿದಂತೆ ಎಲ್ಲಾ ಒಳ ಪಂಗಡಗಳ ಏಳ್ಗೆಗಾಗಿ ಜ.6 ರಿಂದ ಐತಿಹಾಸಿಕ ಪಾದಯಾತ್ರೆ ನಡೆಸಲು ತೀರ್ಮಾನಿಸಿದ್ದೇವೆ, ಬ್ರಹ್ಮಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮಕ್ಕೆ 500 ಕೋಟಿ ಬಿಡುಗಡೆ ಮಾಡಬೇಕು, ಈಡಿಗ ಸಮಾಜಕ್ಕೆ 5 ಎಕರೆ ಜಮೀನು ಪ್ರತಿ ಕೊಡಬೇಕು, 2ಎ ಯಿಂದ ಎಸ್.ಟಿ ಮೀಸಲಾತಿಗೆ ಸೇರಿಸಬೇಕು, ಬ್ರಹ್ಮಶ್ರೀ ನಾರಾಯಣ ಗುರುಗಳ ಪುತ್ಥಳಿ ವಿಧಾನಸೌಧದ ಎದುರುಗಡೆ ಸ್ಥಾಪಿಸಬೇಕು, ಮದ್ಯ ಮಾರಾಟದಲ್ಲಿ ಈಡಿಗ ಸಮಾಜದ ಸೇರಿದಂತೆ 26 ಪಂಗಡಗಳಿಗೆ ಶೇ.50 ರಷ್ಟು ಮಿಸಲಾತಿ ನೀಡಬೇಕು ಹಾಗೂ ಶಿವಮೊಗ್ಗ ಜಿಲ್ಲೆಯ ಮುಳಗುಡೆ ಸಂತ್ರಸ್ತರಿಗೆ ಸೂಕ್ತ ಪರಿಹಾರವಾಗಿ ಮನೆ ಹಾಗೂ ಜಮೀನು ನೀಡುವುದು ಸೇರಿದಂತೆ ಒಟ್ಟು 18 ಬೇಡಿಕೆಗಳು ಈಡೇರಿಕೆಗಾಗಿ ಒತ್ತಾಯಿಸಿ ಮನವಿ ಸಲ್ಲಿಸಿದರು.

ಈ ವೇಳೆ ಪವನ್ ಕುಮಾರ, ರಾಮಕೃಷ್ಣ, ಸುರೇಂದ್ರ, ಎಮ್.ಎನ್.ರಾಜಶೇಖರ್, ಪದ್ಮನಾಭ, ಶ್ರೀನಿವಾಸ, ಸೇರಿದಂತೆ ಅನೇಕರಿದ್ದರು.

# ಇಂದು ಮತಗಳ್ಳತನ ಪ್ರತಿಭಟನೆ: ಡಿಕೆಶಿ ದೆಹಲಿಗೆ



**ಬೆಂಗಳೂರು, ಡಿ. 13–** ಕರ್ನಾಟಕ ಸೇರಿದಂತೆ ದೇಶದ ಹಲವೆಡೆ ಮತಗಳ್ಳತನದ ವಿರುದ್ಧ ನಾಳೆ ನಡೆಯಲಿರುವ ಹೋರಾಟದಲ್ಲಿ ಪಾಲ್ಗೊಳ್ಳಲು ಶನಿವಾರ ಸಂಜೆ ದೆಹಲಿಗೆ ತೆರಳುವುದಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸದಾಶಿವನಗರದ ತಮ್ಮ ನಿವಾಸದ ಬಳಿ ಇಂದು ಸುದ್ದಿಗಾರ 'ರೊಂದಿಗೆ ಮಾತನಾಡಿದ ಅವರು ಕಾಂಗ್ರೆಸ್ ಪಕ್ಷ ಈಗಾಗಲೇ ಮತಗಳ್ಳತನದ ವಿರುದ್ಧ ಅಭಿಯಾನ ಆರಂಭಿಸಿದೆ. ನಾಳೆ ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ರಾಜ್ಯದಿಂದ 100ಕ್ಕೂ ಹೆಚ್ಚು ಕಾಂಗ್ರೆಸ್ ಮುಖಂಡರು ಭಾಗವಹಿಸಲಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ನೂರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮತಗಳ್ಳತನದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಪಕ್ಷದ ಮುಖಂಡರಾದ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಶಕ್ತಿ ತುಂಬುವ ಸಲುವಾಗಿ ರಾಜ್ಯದ ಮುಖಂಡರು, ಕಾರ್ಯಕರ್ತರು ನಾಳಿನ ಪ್ರತಿಭಟನೆಯಲ್ಲಿ ಭಾಗವಹಿಸುವುದಾಗಿ ಹೇಳಿದರು.

ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಈಗಾಗಲೇ ದೆಹಲಿಗೆ ತೆರಳಿರುವ ಮುಖಂಡರು ಮತ್ತು ಕಾರ್ಯಕರ್ತರಿಗೆ ವ್ಯವಸ್ಥೆಗಳನ್ನು ಮಾಡಬೇಕಾದ ಜವಾಬ್ದಾರಿ ತಮ್ಮ ಮೇಲೆ ಇದೆ ಎಂದರು.

ದೆಹಲಿ ಭೇಟಿ ವೇಳೆ ಪಕ್ಷದ ವರಿಷ್ಠರನ್ನು ಭೇಟಿ ಮಾಡುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಗೆ ಬಂದಿರುವ ಸಮನ್ಸ್ ಬಗ್ಗೆ ವಿವರಗಳನ್ನು ಸಿದ್ಧಪಡಿಸಬೇಕಾಗಿದೆ. ತಮಗೆ ಸುಯಾವಕಾಶ ಕಡಿಮೆಯಿದೆ ಎಂದು ಉತ್ತರಿಸಿದರು.

ನಾಳೆ ನಡೆಯಲಿರುವ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಭಾಗವಹಿಸಲಿದ್ದು ಅವರು ಕೂಡ ದೆಹಲಿಗೆ ತೆರಳಲಿದ್ದಾರೆ.

# ಶಿಕ್ಷಣ ಮತ್ತು ಸಂಸ್ಕಾರ ಹೆಣ್ಣಿಗೆ ಎರಡು ಕಣ್ಣುಗಳಿದ್ದಂತೆ– ವಿಶ್ವನಾಥ ಹೂಗಾರ






ಧೈರ್ಯದ ದಾರಿ

**ಗುರುಗುಂಟಾ,ಡಿ.13–** ಸಮಾಜ ಹೆಣ್ಣನ್ನು ಸಂಸ್ಕಾರವೆಂಬ ಚೌಕಟ್ಟಿನಲ್ಲಿ ಬಂಧಿಸಿ ಅವಳ ಕನಸನ್ನ ಬದುಕಿನ ಗುರಿಯನ್ನು ಕಸಿದುಕೊಳ್ಳುತ್ತಾ ಬರುತ್ತಿದೆ ಆದರೆ ನಿಜವಾದ ಸಂಸ್ಕಾರ ಎನ್ನುವುದು ತಡೆಗೋಡೆಗಳನ್ನು ಕಟ್ಟುವುದಲ್ಲ ಅವಳ ಜೀವನಕ್ಕೆ ಸಮಾನತೆ ಮತ್ತು ಸ್ವಾತಂತ್ರ್ಯದ ಅವಕಾಶಗಳನ್ನ ಕಲ್ಪಿಸುವುದಾಗಿದೆ ಹಿಂದಿನ ಆಧುನಿಕ ಜೀವನದಲ್ಲಿ ಹೆಣ್ಣಿಗೆ ಶಿಕ್ಷಣ ಜೊತೆಗೆ ಅವಕಾಶಗಳು ಮಹತ್ವವಾಗಿದ್ದು ಏಕೆಂದರೆ ಮಹಿಳೆಯರು ಶಿಕ್ಷಣ ಮತ್ತು ಸಂಸ್ಕಾರದಿಂದ ಮಾತ್ರ ಸಶಕ್ತಬದುಕನ್ನ ರೂಪಿಸಿಕೊಳ್ಳಲು ಸಾಧ್ಯ, ಅದರಿಂದ ಶಿಕ್ಷಣ ಮತ್ತು ಸಂಸ್ಕಾರ ಹೆಣ್ಣಿಗೆ ಎರಡು ಕಣ್ಣುಗಳಿದ್ದಂತೆ ಎಂದು ನ್ಯೂಸ್ –18 ಎರಡು ಎಂದು ಜಿಲ್ಲಾ ವರದಿಗಾರರ ಶ್ರೀ ವಿಶ್ವನಾಥ್ ಹೂಗಾರ ವಿದ್ಯಾರ್ಥಿನಿಯರಿಗೆ ಕಿವಿ ಮಾತು ಹೇಳಿದರು

ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಡಾ. ಸುಧಾ ಮೂರ್ತಿ ಇನ್ಫೋ ಮಹಿಳಾ ಪದವಿ ಕಾಲೇಜಿನ 2026–27ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ 7 ನೇ ದಿನದ ವಿಶೇಷ ಶಿಬಿರದ ಸಮಾರೋಪ ಸಮಾರಂಭವು ಸುಕ್ಷೇತ್ರ ಅಮರೇಶ್ವರ ಬ್ರಹನ್ಮಠ ದೇವರಭೂಪುರದಲ್ಲಿ ನಡೆಯಿತು ಈ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಲು ಆಗಮಿಸಿದ್ದ ಶ್ರೀ ವಿಶ್ವನಾಥ ಹೂಗಾರ್ ಅವರು "ಹೆಣ್ಣಿಗೆ ಶಿಕ್ಷಣ ಒಂದೇ ಸಾಕೆ ಸಂಸ್ಕಾರವು ಬೇಕೆ" ಎನ್ನುವ ಉಪನ್ಯಾಸದಲ್ಲಿ ಶಿಕ್ಷಣವಿಲ್ಲದ ಹೆಣ್ಣು ಮಗಳ ಜೀವನ ದಿಕ್ಕಿಲ್ಲದ ದೀಪದಂತೆ ಆದ್ದರಿಂದ ಶಿಕ್ಷಣ ಅವಳಿಗೆ ಬದುಕು ಕೊಟ್ಟರೆ ಸಂಸ್ಕಾರ ಗೌರವ ಹೆಚ್ಚಾಗುವಂತೆ ಮಾಡುತ್ತದೆ ಹಾಗಾಗಿ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಸಂಸ್ಕಾರವನ್ನು ಜೀವನದಕ್ಕೂ ಅಳವಡಿಸಿಕೊಂಡು ಆದರ್ಶ ಬದುಕು ನಿರ್ಮಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ ಶ್ರೀ ಅಮರೇಶ್ವರ ಗುರು ಷ.ಬ್ರ ಶ್ರೀ ಗಜಗಂಡ ಶಿವಾಚಾರ್ಯ ಮಹಾಸ್ವಾಮಿಜಿಯವರು ತಮ್ಮ ಆಶೀರ್ವಚನದಲ್ಲಿ ಶಿಕ್ಷಣ ಮತ್ತು ಸಂಸ್ಕಾರ ಎರಡು ಮೂಲ ಭಾರತೀಯ ಸಂಸ್ಕೃತಿ ಯ ಪರಂಪರೆಯಾಗಿದೆ ಶಿಕ್ಷಣ ಅವಳ ಬದುಕಿಗೆ ಬೆಳಕಾದರೆ ಸಂಸ್ಕಾರ ಅವಳ ಹೃದಯಕ್ಕೆ ಬೆಳಕಾಗುತ್ತದೆ ಇವೆರಡು ಇದ್ದಾಗ ಅವಳು ಸಮಾಜದ ಮತ್ತು ಕುಟುಂಬದ ಶಕ್ತಿಯಾಗಲು ಸಾಧ್ಯ. ಆದರಿಂದ ನಿಮ್ಮ ಬಾಳಲ್ಲಿ ಇವೆರಡು ಮುಖ್ಯವಾಗಲಿ ಎಂದರು. ಮತ್ತಷ್ಟು ಬೆಳಕು ಚೆಲ್ಲುತ್ತ ಜ್ಞಾನ ಮತ್ತು ಸಂಸ್ಕಾರ ಎರಡು ಪಕ್ಷಿಯ ರೆಕ್ಕೆಗಳಿದ್ದಂತೆ ಎರಡು ಇದ್ದಾಗ ಮಾತ್ರ ಹೆಣ್ಣಿನ ವ್ಯಕ್ತಿತ್ವ ಪರಿಪೂರ್ಣತೆ ಹೊಂದಿ ಬೆಳಕು ನೀಡುವ ಶಕ್ತಿಯಾಗುತ್ತಿರಿ ಎಂದು ಆಶೀರ್ವದಿಸಿದರು ಡಾಕ್ಟರ್ ಸುಧಾ ಮೂರ್ತಿ ಇನ್ಫೋ ಮಹಿಳಾ ಕಾಲೇಜಿನ ಈ ಕಾರ್ಯಕ್ರಮ ನಮ್ಮ ಶ್ರೀ ಮಠದಲ್ಲಿ ನಡೆದದ್ದು ಮತ್ತು ನೂರಾರು ವಿದ್ಯಾರ್ಥಿಗಳು ಭಾಗಿಯಾದದ್ದು ನೋಡಿ ಖುಷಿಯಾಯಿತು ಎಂದರು

ಪ್ರಾಸ್ತವಿಕವಾಗಿ ಮಾತನಾಡಿದ ಕಾಲೇಜಿನ ಅರ್ಥಶಾಸ್ತ್ರದ ಅರ್ಥಶಾಸ್ತ್ರದ ಉಪನ್ಯಾಸಕರಾದ ಮಾರುತಿ. ಎಸ್ ಅವರು ಮಾತನಾಡಿ ಶ್ರೀ ಮಠದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಗುರುಗಳ ಮುಂದೆ ಮಾತನಾಡಲು ಅವಕಾಶ ದೊರೆತಿರುವುದು ನನ್ನ ಸೌಭಾಗ್ಯ ಧನ್ಯತಾ ಭಾವ ಮೂಡಿಸಿತು ಎಂದರು ಈ ಶಿಬಿರವು ನಮಗೆ ಕೇವಲ ಕೆಲಸ ಮಾಡಲು ಕಲಿಸಲಿಲ್ಲ ಸಮಾಜವನ್ನು ನೋಡುವ ದೃಷ್ಟಿ ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಮತ್ತು ಆರೋಗ್ಯ ಮಾನವೀಯ ಮೌಲ್ಯಗಳನ್ನು ಬಿತ್ತಿತು. ಎಂದರು ಕೊನೆಗೆ ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥಾಪಕರಾದ ಂಇಇ ಶ್ರೀ ಕೆಂಚಪ್ಪ ಬಾವಿಮನಿಯವರು ಮಾತನಾಡಿ ಹೆಣ್ಣು ಮಕ್ಕಳ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಏಕ ಉದ್ದೇಶದಿಂದ ಪ್ರಾರಂಭವಾದ ಈ ಕಾಲೇಜು ಇವತ್ತು ಎಲ್ಲರ ಸಹಕಾರದಿಂದ ಹಿರಿಯರ ಆಶೀರ್ವಾದದಿಂದ ಅತಿ ಹೆಚ್ಚು ವಿದ್ಯಾರ್ಥಿನಿಯರು ಕಲಿಯುವ ಸಂಸ್ಥೆಯಾಗಿದ್ದು ವಯಕ್ತಿಕವಾಗಿ ಖುಷಿ ತಂದಿದೆ ಡಾ. ಸುಧಾ ಮೂರ್ತಿಯವರ ಆದರ್ಶ ಸರಳತೆ ಸೇವಾಮನೋಭಾವನೆಯಂತಹ ಗುಣಗಳನ್ನು ನೀವೆಲ್ಲರೂ ಅಳವಡಿಸಿಕೊಂಡು ಹೆತ್ತವರಿಗೆ ಮತ್ತು ಸಂಸ್ಥೆಗೆ ಕೀರ್ತಿ ತರುವಂತರಾಗಿ ಎಂದು ಭಾವನಾತ್ಮಕವಾಗಿ ಹೇಳಿದರು ಎನ್ ಎಸ್ ಎಸ್ ಶಿಬಿರಾರ್ಥಿ ಕಿತ್ತೂರು ರಾಣಿ ಚೆನ್ನಮ್ಮ ತಂಡದವರು ನಿರೂಪಿಸಿದರು ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಅರ್ಪಿತ ಕೆ ಬಾವಿಮನಿ ಆಡಳಿತ ಅಧಿಕಾರಿಗಳಾದ ವಿನೋದ್ ಗುಡಿಮನಿ ಪ್ರಾಚಾರ್ಯರಾದ ಶ್ರೀ ರಮೇಶ

# ಪಡಿತರಚೀಟಿಯಲ್ಲಿನ ಹೆಸರು ಸೇರ್ಪಡೆ/ ತಿದ್ದುಪಡಿಗೆ ನಿರಂತರವಾಗಿ ಅವಕಾಶ : ಸಚಿವ ಮುನಿಯಪ್ಪ



**ಬೆಳಗಾವಿ,ಡಿ.13–** ಪಡಿತರಚೀಟಿಯಲ್ಲಿನ ಹೆಸರು ಸೇರ್ಪಡೆ/ ತಿದ್ದುಪಡಿ ಮಾಡಲು ನಿರಂತರವಾಗಿ ಅವಕಾಶ ಕಲ್ಪಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ವಿಧಾನಸಭೆಗೆ ತಿಳಿಸಿದ್ದಾರೆ.

ಶಾಸಕ ಗೋಪಾಲಕೃಷ್ಣ ಬೇಳೂರು ಅವರ ಗಮನಸೆಳೆಯುವ ಸೂಚನೆಗೆ ಉತ್ತರ ನೀಡಿರುವ ಸಚಿವರು, ತುರ್ತು ವೈದ್ಯಕೀಯ ಪರಿಸ್ಥಿತಿ ಹಿನ್ನಲೆಯುಳ್ಳ ಅರ್ಹರಿಗೆ, ಇ–ಶ್ರಮ್ ನೋಂದಾಯಿತ ಕಾರ್ಮಿಕರಿಗೆ ಹಾಗೂ ಪಿವಿಟಿಜಿಎಸ್‌ರಡಿ ಬರುವ ಬುಡಕಟ್ಟು ಸಮುದಾಯದವರಿಗೆ ಹೊಸ ಆದ್ಯತಾ ಪಡಿತರಚೀಟಿಯನ್ನು ಕಾಲಕಾಲಕ್ಕೆ ನೀಡಲು ಕ್ರಮ ವಹಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಈಗಾಗಲೇ ಆದ್ಯತಾ ಪಡಿತರಚೀಟಿ ಪಡೆದಿರುವವರಲ್ಲಿ ಅನರ್ಹರನ್ನು ಪತ್ತೆಹಚ್ಚುವ ಕಾರ್ಯವು ನಿರಂತರವಾಗಿ ನಡೆಯುತ್ತಿದ್ದು, ಅನರ್ಹ ಪಡಿತರಚೀಟಿಯನ್ನು ರದ್ದುಪಡಿಸಿದಾಗ ಅಷ್ಟೆ? ಪ್ರಮಾಣದ ಹೊಸ ಪಡಿತರಚೀಟಿ ನೀಡಲು ಅವಕಾಶವಿರುತ್ತದೆ ಎಂದಿದ್ದಾರೆ.ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿ ರಾಜ್ಯದಲ್ಲಿ 4,01,93,000 ಫ'ಲಾನುಭ'ವಿಗಳಿಗೆ ಪಡಿತರ ವಿತರಿಸಲು ಗುರಿ ನಿಗದಿಪಡಿಸಲಾಗಿದೆ. ಆದರೆ ರಾಜ್ಯದಲ್ಲಿ 4,53,89,504 ಫಲಾನುಭವಿಗಳಿಗೆ ಆಹಾರ ಧಾನ್ಯವನ್ನು ವಿತರಿಸಲಾಗುತ್ತಿದೆ ಎಂದು ಹೇಳಿದ್ದಾರೆ.

# ಕೊಬ್ಬರಿ ಕನಿಷ್ಠ ಬೆಂಬಲ ಬೆಲೆ ಹೆಚ್ಚಳಕ್ಕೆ ಕೇಂದ್ರ ಅನುಮತಿ, ರಾಜ್ಯದ ರೈತರಿಗೆ ಸಿಹಿ ಸುದ್ದಿ



**ಬೆಂಗಳೂರು,ಡಿ.13–**ಪ್ರಧಾನಿ ನರೇಂದ್ರಮೋದಿ ಅವರ ನೇತೃತ್ವದ ಕೇಂದ್ರ ಸಚಿವ ಸಂಪುಟವು 2026ರ ಹಂಗಾಮಿನ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು (Mnimum Support Price) ಹೆಚ್ಚಿಸಲು ಅನುಮೋದನೆ ನೀಡಿದ್ದು, ರಾಜ್ಯದ ರೈತರಿಗೆ ಮತ್ತೊಮ್ಮೆ ಸಿಹಿ ಸುದ್ದಿ ನೀಡಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕರ್ನಾಟಕದ ತೆಂಗು ಬೆಳೆಗಾರರಿಗೆ ಮೋದಿ ಸರ್ಕಾರವು ಹೊಸವರ್ಷದ ಕೊಡುಗೆಯಾಗಿ ಕೊಬ್ಬರಿ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ ಮಾಡಿದೆ ಎಂದು ಹೇಳಿದ್ದಾರೆ.

ಕೇಂದ್ರದ ಈ ನಿರ್ಧಾರದಿಂದಾಗಿ ರಾಜ್ಯದ ತೆಂಗು ಬೆಳೆಗಾರರಿಗೆ ಹೆಚ್ಚಿನ ಲಾಭ ದೊರೆಯಲಿದ್ದು, ಹೋಳು ಕೊಬ್ಬರಿ ಮತ್ತು ಉಂಡೆ ಕೊಬ್ಬರಿ ಎರಡರ ದರದಲ್ಲೂ ಗಮನಾರ್ಹ ಏರಿಕೆ ಮಾಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಹೋಳು ಕೊಬ್ಬರಿಗೆ 445 ರೂ., ಉಂಡೆ ಕೊಬ್ಬರಿಗೆ 400 ರೂ. ಹೆಚ್ಚಳ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಹೋಳು ಕೊಬ್ಬರಿ ಕ್ವಿಂಟಾಲ್‌ಗೆ 2025ರಲ್ಲಿ 11,582 ರೂ. ಇದ್ದ ದರವು 2026ಕ್ಕೆ 12,027 ರೂ.ಗೆ ಏರಿಕೆಯಾಗಲಿದೆ. ಒಟ್ಟು 445 ರೂ. ಹೆಚ್ಚಳವಾಗಿದೆ ಎಂದು ಹೇಳಿರುವ ಅವರು, ಉಂಡೆ ಕೊಬ್ಬರಿ ಪ್ರತಿ ಕ್ವಿಂಟಾಲ್‌ಗೆ ಪ್ರಸ್ತುತ 12,100 ರೂ. ಇದ್ದು 2026ಕ್ಕೆ 12,500 ರೂ. ಏರಿಕೆಯಾಗಲಿದ್ದು, ಒಟ್ಟು 400 ರೂ. ಹೆಚ್ಚಳವಾಗಲಿದೆ ಎಂದು ತಿಳಿಸಿದ್ದಾರೆ.

2014ರಿಂದ ಕೇಂದ್ರ ಸರ್ಕಾರವು ಮಿಲ್ಲಿಂಗ್ ಕೊಬ್ಬರಿಯ ಎಂಎಸ್?ಪಿಯನ್ನು ಗಣನೀಯವಾಗಿ ಹೆಚ್ಚಿಸುತ್ತಾ ಬಂದಿದ್ದು, 2014ರ ಮಾರುಕಟ್ಟೆ ಋತುವಿನಲ್ಲಿ ಕ್ವಿಂಟಲ್‌ಗೆ ಎಂಎಸ್‌ಪಿ 5,250 ರೂ. ಇತ್ತು. ಕಳೆದ 10 ವರ್ಷಗಳಲ್ಲಿ ಶೇ.129ರಷ್ಟು ಜಾಸ್ತಿ ಆಗಿದೆ. ಅದೇ ರೀತಿ ಉಂಡೆ ಕೊಬ್ಬರಿಯ ಬೆಲೆಯು ಕ್ವಿಂಟಲ್‌ಗೆ 5,500 ರೂ.ನಿಂದ 12,500 ರೂ.ಗೆ ಏರಿಕೆಯಾಗಿದ್ದು, ಶೇ.127 ರಷ್ಟು ಹೆಚ್ಚಳವಾಗಿದೆ ಎಂದು ಅವರು ವಿವರಿಸಿದ್ದಾರೆ.

# ಪಿ.ಎಂ ಕುಸುಮ್–ಬಿ ಯೋಜನೆಯಡಿ ಕೃಷಿ ಪಂಪ್‌ಸೆಟ್‌ಗಳಿಗೆ ಸೋಲಾರ್ ಪಂಪ್‌ಸೆಟ್ ಅಳವಡಿಸಲು ಯೋಜನೆ



**ಬೆಳಗಾವಿ,ಡಿ.13–** ಪಿ.ಎಂ ಕುಸುಮ್–ಬಿ ಯೋಜನೆಯಡಿ ರಾಜ್ಯದಲ್ಲಿ ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ಅವಲಂಬನೆ ಕಡಿಮೆ ಮಾಡಲು ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಲು ಯೋಜನೆ ಕೈಗೊಳ್ಳಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ವಿಧಾನಸಭೆಗೆ ತಿಳಿಸಿದ್ದಾರೆ. ಶಾಸಕ ಕೆ.ವೈ.ನಂಜೇಗೌಡ ಅವರು ನಿಯಮ 73ರಡಿ ನೀಡಿದ್ದ ಸೂಚನೆಗೆ ಉತ್ತರ ನೀಡಿರುವ ಸಚಿವರು, ಕೇಂದ್ರ ಸರ್ಕಾರದ ಎಂಎನ್‌ಆರ್‌ಇ ಮತ್ತು ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಕೆಆರ್‌ಇಡಿಎಲ್ ವತಿಯಿಂದ ರೈತರ ಜಮೀನಿನಲ್ಲಿ ಕೊಳವೆ/ತೆರೆದ ಬಾವಿಗಳಿಗೆ 40 ಸಾವಿರ ಸೋಲಾರ್ ಪಂಪ್‌ಸೆಟ್‌ಗಳನ್ನು ಅಳವಡಿಸಲು ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದಿದ್ದಾರೆ.

ಈ ಯೋಜನೆ ಅನ್ವಯ ಸೌರ ಪಂಪ್‌ಸೆಟ್ ಅಳವಡಿಕೆಯ ಒಟ್ಟು ವೆಚ್ಚದ ಶೇ.30ರಷ್ಟು ಮೊತ್ತವನ್ನು ಎಂಎನ್‌ಆರ್‌ಇ ಶೇ.50ರಷ್ಟು ಮೊತ್ತವನ್ನು ರಾಜ್ಯ ಸರ್ಕಾರ ಸಹಾಯಧನವಾಗಿ ನೀಡುತ್ತದೆ. ಉಳಿದ ಶೇ.20ರಷ್ಟು ಮೊತ್ತವನ್ನು ಮಾತ್ರ ಫಲಾನುಭವಿಗಳಿಂದ ಪಡೆದು ರೈತರ ಜಮೀನುಗಳಲ್ಲಿ ಸೋಲಾರ್ ಪಂಪ್‌ಸೆಟ್ ಅಳವಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

# ಗ್ರಾಮೀಣ ಭಾಗಗಳಿಗೂ ಮೂಲಸೌಕರ್ಯ ಒದಗಿಸಲು ಆದ್ಯತೆ: ಶಾಸಕ ತುರ್ವಿಹಾಳ



**ಮಸ್ಕಿ,ಡಿ.13–** ಕ್ಷೇತ್ರದ ಸಮಗ್ರ ಹಾಗೂ ಸಮತೋಲನದ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದ್ದು, ಗ್ರಾಮೀಣ ಭಾಗಗಳಿಗೂ ಸಮಾನವಾಗಿ ಮೂಲಸೌಕರ್ಯ ಒದಗಿಸಲಾಗುತ್ತಿದೆ ಎಂದು ಶಾಸಕ ಹಾಗೂ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರ್ವಿಹಾಳ ಶನಿವಾರ ಹೇಳಿದರು.

ತಾಲ್ಲೂಕಿನ ಮೆರನಾಳ, ಗೋನಾಳ, ಹರ್ವಾಪೂರ, ಮುದಬಾಳ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ರಸ್ತೆ, ಕುಡಿಯುವ ನೀರು, ವಿದ್ಯುತ್, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಶಾಶ್ವತ ಪರಿಹಾರ ಒದಗಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದರು. ಗ್ಯಾರಂಟಿ ಯೋಜನೆಗಳ ಮೂಲಕ ಬಡವರು, ರೈತರು ಹಾಗೂ ಕಾರ್ಮಿಕ ವರ್ಗದ ಬದುಕು ಸುಧಾರಣೆಯಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮೈಬುಸಾಬ ಮುದ್ದಾಪುರ, ಕಾಂಗ್ರೆಸ್ ಗ್ರಾಮೀಣ ಘಟಕದ ಅಧ್ಯಕ್ಷ ಹನುಮಂತಪ್ಪ ಮುದ್ದಾಪೂರ, ಪಂಪನ ಗೌಡ ಪಾಟೀಲ ಗುಡದೂರು, ಕ್ಯಾಷುಟೆಕ್ ಎಂಜಿನಿಯರ್ ತಿಮ್ಮಣ್ಣ ಉಪ್ಪಾರ ಸೇರಿದಂತೆ ಅನೇಕ ಮುಖಂಡರು ಇದ್ದರು.

# ನಾಳೆ ವಿಜಯಕಿಶೋರ್ ಪುಣ್ಯಸ್ಮರಣೆ



**ಬಳ್ಳಾರಿ, ಡಿ.13–** ನಗರದ ರಾಘವಕಲಾ ಮಂದಿರದಲ್ಲಿ ನಾಳೆ ಸಂಜೆ 4 ಗಂಟೆಗೆ ಹಿಂದುಸ್ಥಾನಿ ಗಾಯಕಿ , ಸುಗಮ ಸಂಗೀತ ವಿದುಷಿ ವಿಜಯಕಿಶೋರ್ ಅವರ ನಾಲ್ಕನೇ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಅವರ ಶಿಷ್ಯ ಬಳಗ ಹಮ್ಮಿಕೊಂಡಿದೆ. ಕಾರ್ಯಕ್ರಮದ ಅಂಗವಾಗಿ ಶಿಷ್ಯ ಬಳಗದಿಂದ ಹಾಡುಗಾರಿಕೆ ಮತ್ತು ರಾಯಚೂರಿನ ವರದೇಂದ್ರ ಗಂಗಾಖೆಡ ಅವರಿಂದ ಗಾಯನ ಕಾರ್ಯಕ್ರಮ ನಡೆಯಲಿದೆಂದು ಹಿರಿಯ ಪತ್ರಕರ್ತ ಎಂ.ಅಹಿರಾಜ್ ತಿಳಿಸಿದ್ದಾರೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE